ಮಾನಸಿ

ಮೇ 2002

ತಿಂಗಳ ಪತ್ರಿಕೆ

- ಬೀದಿ ಬದಿಯ ಹೆಣ್ಣು ಮಕ್ಕಳೇ, ನಿಮ್ಮ ಸಶಕ್ತೀಕರಣ ಎಂದು ?
- ಪೊಲೀಸರ ವಿರುದ್ಧ ಲೈಂಗಿಕ ಶೋಷಿತ ಮಹಿಳೆಯರ ಸಮರ
- ತೀವ್ರವಾಗುತ್ತಿರುವ ಗುತ್ತಿಗೆ ಪೌರ ಕಾರ್ಮಿಕರ ಹೋರಾಟ
- ರಾಷ್ಟ್ರೀಯ ಮಹಿಳಾ ಆಯೋಗಕ್ಕೊಂದು ಪತ್ರ
- ನಾನು ಕಪ್ಪು ಎಂದು ಮೊದಲೇ ಗೊತ್ತಿರಲಿಲ್ಲವೇ ?
- ಮೂಲ ಭೂತವಾದ ಎರಡು ಮುಖಗಳು

ಮಾನಸ

ತಿಂಗಳ ಪತ್ರಿಕೆ ಮೇ - 2002

ಸಂಪುಟ 21 ಸಂಚಿಕೆ : 4

ವಿಳಾಸ

''ಮಾನಸ'' ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಇ-ಮೈಲ್ : manasapathrike@yahoo.co.in

ಸೂಚನೆ: ಬಿಡಿ ಪ್ರತಿ 5-00 ರೂ.

ವಾರ್ಷಿಕ ಚಂದಾ 50-00 ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ.........

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - 560 067



ಸಂಪಾದಕೀಯ

ಗೋದ್ರಾ ರೈಲು ದಹನದ ಬೆಂಕಿಯ ಜ್ವಾಲೆಗಳು ಫೆಬ್ರುವರಿ 27ರ ನಂತರದಲ್ಲಿ ಇಡಿಯ ಗುಜಾರಾತನ್ನು ಆವರಿಸಿಕೊಂಡು, ಸಾವಿರಾರು ಮುಸ್ಲಿಂ ನಿರಪರಾಧಿಗಳನ್ನು, ವಿಶೇಷವಾಗಿ ಮಕ್ಕಳು ಹಾಗೂ ಮಹಿಳೆಯರನ್ನು ಜೀವಂತವಾಗಿ ದಹಿಸಿದ ಕತೆಗಳು, ಘಟನೆಗಳು ನಮ್ಮ ಮುಂದೆಯೇ ಇರುವಾಗ, ಈ ಬಗ್ಗೆ ಫೋರೆನ್‌ಸಿಕ್ ತಜ್ಞರು ನೀಡಿರುವ ವರದಿಗಳು ಎಲ್ಲರನ್ನು ಬೆಚ್ಚಿ ಬೀಳಿಸುತ್ತಿವೆ. ವರದಿಯ ಪ್ರಕಾರ ಎಸ್-6 ಬೋಗಿಗೆ ಬೆಂಕಿ ಬಿದ್ದಿರುವುದು ಹೊರಗಿನಿಂದಲ್ಲ. ನಾಲ್ಕು ತಿಂಗಳ ನಂತರದಲ್ಲಿ ಬಂದಿರುವ ಈ ವರದಿ ಗೋದ್ರಾ ಘಟನೆಯ ಸತ್ಯದ ಬಾಗಿಲುಗಳನ್ನು ತೆರೆಯುವ ಮುಂಚೆಯೇ ಈ ಅವಧಿಯಲ್ಲಿ ನಡೆದು ಹೋದ ಒಂದು ಸಮುದಾಯದ ಸಾಮೂಹಿಕ ಹತ್ಯೆಯ ಹೊಣೆಯನ್ನು ಈಗ ಹೊರುವವರು ಯಾರು?

ಫೋರೆನ್‌ಸಿಕ್ ತಜ್ಞರು ಇಡಿಯ ಘಟನೆಯನ್ನು ದೃಶ್ಯೀಕರಿಸಿಕೊಂಡು ನೋಡಿ ಹೊರಗಿನಿಂದ ಬೋಗಿಗೆ ಬೆಂಕಿ ಬಿದ್ದಿರುವುದು ಅಸಂಭವ, ಅಸಾಧ್ಯ ಎನ್ನುತ್ತಾರೆ. ಸೀಟ್ ನಂ.-72 ರ ಪಕ್ಕದ ಪ್ಯಾಸೇಜ್‌ನಲ್ಲಿ ಒಳಗಿನಿಂದಲೇ ಜ್ವಲಂತ ದ್ರವ ಎರಚಿರುವುದು ಸ್ಪಷ್ಟವಾಗತೊಡಗಿದೆ. ಹಾಗಿದ್ದರೆ ನಿಜವಾದ ಅಪರಾಧಿ ಯಾರು? ಇದು ಅರ್ಥವಾಗುವ ಮೊದಲೇ ಹಲವಾರು ಅಪರಾಧಗಳು ನಡೆದುಹೋಗಿವೆ. ಅಪರಾಧಿಗಳಲ್ಲದವರು ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಥಿಯೋ ಪೆಂಟಲ್ ಸೋಡಿಯಂ ನಂತಹ ಚುಚ್ಚು ಮದ್ದನ್ನು ಸತ್ಯಶೋಧನೆಗಾಗಿ ಬಳಸಬಾರದು ಎಂದು ಉಚ್ಚಾಟಿಸಲಾಗಿದ್ದರೂ ಅದನ್ನು ಬಳಸಿ ಮುಖ್ಯ ಅಪರಾಧಿಗಳೆನಿಸಿಕೊಂಡು ಬಂಧಿಸಲ್ಪಟ್ಟಿರುವ ಮಹಮದ್ ಹುಸೇನ್ ಕಲೋಟಾ ಹಾಗೂ ಹಾಜಿ ಬಿಲಾಲ್ ಇಸ್ಮಾಯಿಲ್ ಅವರಿಂದ ಸತ್ಯ ಹೊರಡಿಸಲು ಪ್ರಯತ್ನಿಸಲಾಗಿದೆ. ಇದರ ಅಪರಾಧದ ಹೊಣೆ ಹೊರುವವರು ಯಾರು?

ಈ ನಾಲ್ಕು ತಿಂಗಳ ಅವಧಿಯೊಳಗೆ ಮಹಿಳೆಯರು ದೌರ್ಜನ್ಯಕ್ಕೆ ಒಳಗಾದ ಘಟನೆಗಳು ಕಣ್ಣ ಮುಂದೆ ಸಾಕ್ಷಿಯಾಗಿ ನಿಂತಿವೆ. ಮನೆ, ಮಠ, ಮಾರು ಕಳೆದುಕೊಂಡು ನಿರಾಶ್ರಿತ ತಾಣಗಳಲ್ಲಿ ಬದುಕು ಕಳೆಯುತ್ತಿರುವ ಇವರು ನೆನೆಸಿಕೊಳ್ಳಲು ಸಾಧ್ಯವಾಗದಂತಹ ಹಿಂಸಾಚಾರಕ್ಕೆ ಒಳಗಾದುದನ್ನು ನೆನೆಸಿಕೊಳ್ಳುತ್ತಾ ಇಡಿಯ ಭವಿಷ್ಯ ಕಳೆಯಬೇಕಾದ ಸ್ಥಿತಿಗೆ ಯಾರು ಹೊಣೆ? ಮಕ್ಕಳ ಯಾವ ಪಾಪಕ್ಕೆ ಅವರು ನಿರಾಶ್ರಿತ ತಾಣಗಳ ಕೂಪಗಳಲ್ಲಿ ಕಾಲ ಕಳೆಯುತ್ತಿದ್ದಾರೆ? ಇದಕ್ಕೆಲ್ಲ ಯಾರು ಹೊಣೆ? ಸರ್ಕಾರ ಇದಕ್ಕೆಲ್ಲ ಉತ್ತರ ನೀಡಬೇಕು. ಉತ್ತರ ಕೊಡಲಾಗದಷ್ಟು ಪಾಪದ ಹೊಣೆಯನ್ನು ಮೋದಿ ಸರ್ಕಾರ ಹೊತ್ತಿದೆ. ಜವಾಬ್ದಾರಿಯಿಂದಿದ್ದರೆ ಈಗಾಗಲೇ ರಾಜೀನಾಮೆ ನೀಡಬೇಕಿತ್ತು. ಹೀಗೆ ಹೊಣೆಗೇಡಿಗಳಾಗಿರುವ ಸರ್ಕಾರಕ್ಕೆ, ರಾಜಕಾರಣಿಗಳಿಗೆ ಜನರ ನೈತಿಕ ಸಿಟ್ಟೇ ಪಾಠ ಕಲಿಸುವಂತಾಗುಹುದೋ ಎಂಬುದನ್ನು ನಾವು ಕಾದು ನೋಡಬೇಕಾಗಿದೆ.

- ಸಂಪಾದಕ ಮಂಡಳಿ

ಬೀದಿ ಬದಿಯ ಹೆಣ್ಣುಮಕ್ಕಳೆ, ನಿಮ್ಮ ಸಶಕ್ತೀಕರಣ ಎಂದು ?

2001ನೇ ವರ್ಷ ಮಹಿಳಾ ವರ್ಷ ಎಲ್ಲೆಲ್ಲೂ ಮಹಿಳಾ ಸಶಕ್ತೀಕರಣದ ಮಾತು ಕೇಳಿಬಂತು. ಭಾರತ ಸರಕಾರ ಹೆಣ್ಣುಮಕ್ಕಳು ಮತ್ತು ಮಹಿಳೆಯರಿಗಾಗಿ ಹಲವು ಯೋಜನೆಗಳನ್ನು ಹಾಕಿಕೊಂಡಿತು. ತಾನು ಹಾಕಿಕೊಂಡ ಕಾರ್ಯಕ್ರಮಗಳ ಜಾರಿಗಾಗಿ ಹಲವು ಕ್ರಮಗಳನ್ನು ಕೈಗೊಂಡಿತು. ಮಹಿಳೆಯರು ಮತ್ತು ಮಕ್ಕಳಿಗಾಗಿ ಒಂದು ಟಾಸ್ಕ್ ಫೋರ್ಸ್‌ನ್ನು ನೇಮಿಸಿತು. ಹೀಗೆ ನಿಯೋಜಿತಗೊಂಡ ಸಮಿತಿಯು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೇಶದಾದ್ಯಂತ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸರಕಾರೀ ಅಂಗಸಂಸ್ಥೆಗಳಿಗೆ ಹಾಗೂ ವಿಶ್ವವಿದ್ಯಾನಿಲಯಗಳಿಗೆ ನಿರ್ದೇಶನ ನೀಡಿತು. ಅದರಂತೆ ಹಲವು ಸಂಸ್ಥೆಗಳು ಅಲ್ಲಲ್ಲಿ ದುಡಿಯುತ್ತಿವೆ. ಆದರೆ ಶಾಲೆಗಳ ಮುಖವನ್ನೇ ಕಂಡಿರದ, ನಿಲ್ಲಲು ಸೂಕ್ತ ನೆಲೆಯಿಲ್ಲದ 'ಹೆತ್ತವರ ಪೋಷಣೆ-ರಕ್ಷಣೆಗೆ ಹೊರತಾದ, ಹಗಲಿರುಳ ಸತತ ದುಡಿಮೆಯ ನಂತರವೂ ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲಾಗದ, ದಾರಿಹೋಕರ' । ಬೀದಿ ಕಾಮಣ್ಣಗಳ ಲೈಂಗಿಕ ದಾಹಕ್ಕೆ, ಹಿಂಸೆಗೆ ಸುಲುಭದಲ್ಲಿ ಬಲಿಯಾಗುವ ಸಾಮಾಜಿಕವಾಗಿ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟ ಒಂದು ವರ್ಗದವರಿದ್ದಾರೆ. ಅವರೇ ಬೀದಿ ಬದಿಯಲ್ಲಿ ವಾಸಿಸುವ ಹೆಣ್ಣುಮಕ್ಕಳು.

ಇಂಥ ಹೆಣ್ಣುಮಕ್ಕಳನ್ನು ಕುರಿತ ಅಧ್ಯಯನವೊಂದು 1992ರಲ್ಲಿ ಕೊಲ್ಕತ್ತಾದಲ್ಲಿ ನಡೆದಿದೆ. ಆಶಿಷ್ ಮುಖ್ಯೋಪಾಧ್ಯಾಯ ಕೊಲ್ಕತ್ತಾ ನಗರದ ಬೀದಿ ಬೀದಿಗಳಲ್ಲಿ ವಾಸಿಸುವ ಒಂದು ಸಾವಿರ ಕುಟುಂಬಗಳ ಹೆಣ್ಣು ಮಕ್ಕಳ ಜೀವನ ಚಿತ್ರಣವನ್ನು ನೀಡಿದ್ದಾರೆ. ಅವರಿಗಾಗಿಯೇ ಸಿದ್ಧಪಡಿಸಿದ ಮೌಲ್ಯಮಾಪನಾ ಸಾಧನಗಳನ್ನು 1000 ಹೆಣ್ಣುಮಕ್ಕಳ ಬದುಕಿಗೆ ಸಂಬಂಧಿಸಿದ ಹಲವು ಅಂಶಗಳನ್ನು ಬೆಳಕಿಗೆ ತಂದಿದ್ದಾರೆ. ಅದರ ಸಂಕ್ಷಿಪ್ತ ವಿವರ ಇಲ್ಲಿದೆ.

ಕೌಟಂಬಿಕ ಹಿನ್ನಲೆ :

ಅಧ್ಯಯನಕ್ಕೊಳಪಟ್ಟ ಕುಟುಂಬಗಳು ಕಡುಬಡತನ, ನಿರುದ್ಯೋಗ, ಅಥವಾ ಕೆಳಸ್ತರದ ಉದ್ಯೋಗ ಮುಂತಾದ ಕಾರಣಗಳಿಗಾಗಿ ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ವಲಸೆ ಬಂದ ಅಲೆಮಾರಿ ಕುಟುಂಬಗಳಾಗಿದ್ದವು. ಶೇ. 82 ಕುಟುಂಬಗಳಿಗೆ ಉಳುವ ಭೂಮಿ ಇರಲಿಲ್ಲ. ಅವರೆಲ್ಲಾ ಕೂಲಿ ಕಾರ್ಮಿಕರಾಗಿದ್ದರು. ಶೇ. 85 ಮಕ್ಕಳ ತಂದೆಯರು ಯಾವುದೋ ಒಂದು ಉದ್ಯೋಗದಲ್ಲಿದ್ದು ಮಾಸಿಕ 300 ಕ್ಕಿಂತ ಹೆಚ್ಚಿನ ಸಂಪಾದನೆಯನ್ನು ಮಾಡುತ್ತಿರಲಿಲ್ಲ. ಶೇ5.5 ಮಂದಿ ಮಾತ್ರ 500ರೂ. ಗಳಿಗಿಂತ ಹೆಚ್ಚಿನ ಆದಾಯ ಹೊಂದಿದ್ದರು. ಈ ಕುಟುಂಬಗಳಿಗೆ ಪೂರಕ ಆದಾಯಕ್ಕಾಗಿ ಆ ಹೆಣ್ಣುಮಕ್ಕಳ ತಾಯಂದಿರು ದುಡಿಯುತ್ತಿದ್ದರು. ಶೇ 60 ಮಕ್ಕಳ ತಾಯಂದಿರು ಮಾಸಿಕ 100 ರೂಪಾಯಿಗಳ ಆದಾಯ ಹೊಂದಿದ್ದರು.

ವಯಸ್ಸು :

ಅಧ್ಯಯನಕ್ಕೊಳಪಟ್ಟ ಮಕ್ಕಳೆಲ್ಲಾ 5 ರಿಂದ 18 ವರ್ಷಗಳೊಳಗಿನವರಾಗಿದ್ದರು. 15 ವರ್ಷಕ್ಕೆ ಮೇಲ್ಪಟ್ಟವರು ಕಡಿಮೆ ಸಂಖ್ಯೆಯಲ್ಲಿದ್ದರು. ವಿವಾಹಿತರಾಗಿದ್ದರು, ಇನ್ನು ಕೆಲವರು ತಮ್ಮ ಊರುಗಳಲ್ಲಿನ ಸಂಬಂಧಿಕರ ಅಥವಾ ಸ್ನೇಹಿತರ ಮನೆಗಳಲ್ಲಿ ಇರುತ್ತಿದ್ದರು. ಇವೆರಡೂ ಸಾಧ್ಯವಾಗಿಲ್ಲದ ಹೆಣ್ಣುಮಕ್ಕಳು ಬೀದಿ ಬದಿಯಲ್ಲೇ ವಾಸಿಸುವುದು ಅನಿವಾರ್ಯವಾಗಿತ್ತು.

ವಿವಾಹ :

ಇವರ ವಿವಾಹಗಳನ್ನು ಹಿರಿಯರು ಏರ್ಪಡಿಸುತ್ತಿರಲಿಲ್ಲ. ಅಲ್ಲದೆ ಅವು ದೀರ್ಘಕಾಲ ಮುಂದುವರಿಯುತ್ತಲೂ ಇರಲಿಲ್ಲ. ಮುರಿದು ಬಿದ್ದ ಕೌಟುಂಬಿಕ ಸಂಬಂಧಗಳಿಂದಾಗಿ ಅವರಿಗೆ ಬೇರೆಲ್ಲೂ ಜಾಗವಿರುತ್ತಿರಲಿಲ್ಲ. ಅಂತ ಸಂದರ್ಭಗಳಲ್ಲಿ ಕಟ್ಟಕಡೆಯ ಪರಿಹಾರವೆಂಬಂತೆ ಅವರು ತಮ್ಮ ಜೀವನೋಪಾಯ ಮಾರ್ಗವಾಗಿ ವೇಶ್ಯಾವೃತ್ತಿಯನ್ನವಲಂಬಿಸುತ್ತಿದ್ದರು. ಇನ್ನು ಕೆಲವರು ವಿವಾಹಕ್ಕೆ ಮೊದಲೇ ಈ ವೃತ್ತಿಗಿಳಿಯುತ್ತಿದ್ದರು.

ವಸತಿ :

ಶೇ. 96.7 ಕುಟುಂಬಗಳು ಬೀದಿ ಬದಿಯಲ್ಲೇ ವಾಸಿಸಿದರೆ ಕೇವಲ ಶೇ. 3.3 ಕುಟುಂಬಗಳು ಕೊಠಡಿಗಳಲ್ಲಿ ವಾಸಿಸುತ್ತಿದ್ದವು. ಶೇ. 30.5 ರಷ್ಟು ಮಂದಿ ತಲೆಯ ಮೇಲೊಂದು ಸೂರನ್ನು ಹೊಂದಿದ್ದರೆ, ಶೇ 69.5 ರಷ್ಟು ಮಂದಿಗೆ ಆಕಾಶವೇ ಸೂರಾಗಿತ್ತು. ಇದರಿಂದ ಹೆಚ್ಚಿನ ಹೆಣ್ಣುಮಕ್ಕಳಿಗೆ ರಕ್ಷಣೆಯ ಕೊರತೆ ಇತ್ತು. ತಂದೆ, ತಾಯಿ ಸೋದರರು ಮತ್ತಿತರ ಸಂಬಂಧಿಕರು ಪಕ್ಕದಲ್ಲಿದ್ದರೂ, ಸಮಾಜ ವಿರೋಧಿ ಶಕ್ತಿಗಳ ಆಕ್ರಮಣಕ್ಕೆ ತುತ್ತಾಗುವ ಸಾಧ್ಯತೆಗಳಿದ್ದವು. ಈ ಸಮೀಕ್ಷೆಯ ಅವಧಿಯಲ್ಲೇ ಮಧ್ಯವರ್ತಿಗಳು, ಗೂಂಡಾಗಳು, ಬೀದಿ ವ್ಯಾಪಾರಿಗಳು ಮುಂತಾದವರು ಅವರನ್ನು ಮನಬಂದಂತೆ ಬಳಸಿಕೊಳ್ಳುತ್ತಿದ್ದುದನ್ನು ಮುಖ್ಯೋಪಾಧ್ಯಾಯರು ಗಮನಿಸಿದರು. ಅವರು ಆ ಹೆಣ್ಣುಮಕ್ಕಳು ಸಂಶೋಧಕರೊಂದಿಗೆ ಮಾತಾಡುವುದನ್ನು ತಡೆಯಲು ಪ್ರಯತ್ನಿಸುತ್ತಿದ್ದರು. ಹಲವು ಮಹಿಳೆಯರು ಕಿಶೋರಾವಸ್ಥೆಯ ಹುಡುಗಿಯರನ್ನು ರಕ್ಷಣೆ ಮತ್ತು ನಿರ್ವಹಣೆಯ ಹೆಸರಿನಲ್ಲಿ ಶೋಷಿಸುತ್ತಿದ್ದರು. ಅವರು ತಮ್ಮ ಸಂಪಾದನೆಯ ಮಾರ್ಗ ಮುಚ್ಚಿಹೋಗುವ ಭಯದಿಂದ ಸಮೀಕ್ಷಾಕಾರರು ಬರದಂತೆ ತಡೆಯುತ್ತಿದ್ದರು.

ದುಡಿಮೆ :

ಹೆಣ್ಣುಮಕ್ಕಳಲ್ಲಿ ಅರ್ಧದಷ್ಟು ಮಂದಿ ಒಂದಲ್ಲ ಒಂದು ಕೆಲಸವನ್ನು ಮಾಡುತ್ತಿದ್ದರು. ಶೇ. 66.6ರಷ್ಟು ಹುಡುಗಿಯರು ದಿನಕ್ಕೆ 6 ಗಂಟೆಗಳು, ಶೇ. 22.4ರಷ್ಟು 7 ರಿಂದ 9 ಗಂಟೆಗಳು ಮತ್ತು ಶೇ. 11 ರಷ್ಟು 10 ಗಂಟೆಗಳಿಗೂ ಹೆಚ್ಚು ಕಾಲ ದುಡಿಯುತ್ತಿದ್ದರು. ಆದರೆ ಅವರ ಸಂಪಾದನೆ ತಮ್ಮ ದುಡಿಮೆಗೆ ತಕ್ಕಂತಿರಲಿಲ್ಲ. ಶೇ. 22ರಷ್ಟು ಹುಡುಗಿಯರ ಮಾಸಿಕ ಸಂಪಾದನೆ 50 ರೂಗಳು. ಶೆ 19.3ರಷ್ಟು ಹುಡುಗಿಯರು ಸಂಪಾದನೆ 50 ರಿಂದ 75 ರೂಪಾಯಿಗಳು ಮತ್ತು ಶೇ57 ಹುಡುಗಿಯರ 75 ರೂಪಾಯಿಗಳಿಗಿಂತ ಹೆಚ್ಚಿನ ಸಂಪಾದನೆ ಹೊಂದಿದ್ದರು.

ಶಿಕ್ಷಣ :

ಈ ಹೆಣ್ಣುಮಕ್ಕಳಿಗೆ ಶಿಕ್ಷಣ ಪಡೆಯುವ ಅವಕಾಶ ದೊರಕಿರಲೇ ಇಲ್ಲ. ಅದೇ ರೀತಿ ವೃತ್ತಿ ತರಬೇತಿ ಪಡೆಯುವ ವಿಷಯದಲ್ಲೂ, ಶಾಲೆಯ ಮುಖವನ್ನೇ ಕಂಡಿರದ ಇವರಿಗೆ ತಮ್ಮ ಬದುಕಿನ ರೀತಿಯ ಬಗ್ಗೆ ಅತೃಪ್ತಿಯ ಭಾವವಿತ್ತು. ಅದನ್ನು ಬದಲಿಸಿಕೊಳ್ಳುವ ಮಾರ್ಗದ ಹುಡುಕಾಟ ಅವರದಾಗಿತ್ತು. ಇವರು ಶಾಲಾ ಶಿಕ್ಷಣ (35%), ವೃತ್ತಿ ತರಬೇತಿ (18.5%), ಉದ್ಯೋಗ (28.7%) ಮತ್ತು ಹಣಕಾಸಿನ ನೆರವನ್ನು (78.8%) ಪಡೆಯಲು ಬಯಸುತ್ತಿದ್ದರು.

ಸಮಸ್ಯೆಗಳು :

ಇವರು ದಿನನಿತ್ಯದ ಬದುಕಿನಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿತ್ತಿತ್ತು. ಶೇ 56.9 ರಷ್ಟು ಹುಡುಗಿಯರ ಊಟ, ಬಟ್ಟೆ ಮತ್ತಿತರ ಅಗತ್ಯಗಳನ್ನು ಪೋಷಕರು ಪೂರೈಸುತ್ತಿದ್ದರಾದರೂ ಉಳಿದ (43.3%) ಹುಡುಗಿಯರು ತಮ್ಮ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳುವುದು ಅನಿವಾರ್ಯವಾಗಿತ್ತು. ಹೀಗಾಗಿ (ಶೇ.98.8) ರಷ್ಟು ಹೆಚ್ಚಿನ ಹುಡುಗಿಯರಿಗೆ ಹಾಕಲು ಅವರ ಅಳತೆಗೆ ಸರಿಯಾದ ಬಟ್ಟೆಗಳಿರಲಿಲ್ಲ. ಇವರೆಲ್ಲಾ ಶ್ರೀಮಂತರ ಮನೆಯ ಮಕ್ಕಳ ಒಳಉಡುಪುಗಳನ್ನು ಅಂದರೆ ಫ್ರಾಕು ಮಿಡಿ ಮುಂತಾದವುಗಳನ್ನು ಧರಿಸುತ್ತಿದ್ದರು.

ಸ್ನಾನ ಮಾಡುವುದು ಕೂಡ ಈ ಹೆಣ್ಣುಮಕ್ಕಳಿಗೊಂದು ಸಮಸ್ಯೆಯೇ ಆಗಿತ್ತು. ಮನೆ ಮತ್ತು ಶೌಚಾಲಯಗಳೇ ಇಲ್ಲದ ಕಡೆ ವಾಸಿಸುವ ಮಕ್ಕಳು ಬೀದಿ ಬದಿಯಲ್ಲಿರುವ ಪುರಸಭೆಯ ನಲ್ಲಿಗಳು, ಕೊಳವೆ ಬಾವಿಗಳನ್ನು ಬಳಸಿಕೊಳ್ಳುತ್ತಿದ್ದರು. ವಯಸ್ಸಿಗೆ ಬಂದ ಹುಡುಗಿಯರು ಮುಂಜಾವಿನಲ್ಲೇ ಸ್ನಾನ ಮಾಡಿಬಿಡುತ್ತಿದ್ದರು. ಕೆಲವೇ ಹುಡುಗಿಯರು(ಶೇ.1.4) ತಾವು ಕೆಲಸ ಮಾಡುವ ಮನೆಯ ಮಾಲೀಕರ ಮನೆಗಳಲ್ಲಿ ಅಥವಾ ನೆರೆಮನೆಗಳಲ್ಲಿ ಸ್ನಾನ ಮಾಡಿಕೊಳ್ಳುತ್ತಿದ್ದರು. ಆದರೆ ಹೆಚ್ಚಿನ ಹೆಣ್ಣುಮಕ್ಕಳು ಈ ಕಾರಣಕ್ಕಾಗಿಯೇ ತಲೆಹಿಡುಕರು, ಗೂಂಡಾಗಳಂಥ ಸಮಾಜ ವಿರೋಧೀ ಶಕ್ತಿಗಳ ಕಾಕದೃಷ್ಟಿಗೆ ಬೀಳುತ್ತಿದ್ದರು.

ನೆರೆಹೊರೆಯವರು ಇವರನ್ನು ಕೆಟ್ಟರೀತಿಯಲ್ಲಿ ಕಾಣುತ್ತಿದ್ದರು (26.1%). ಹೆಚ್ಚಿನವರಿಗೆ (ಶೇ.64.7) ಅವರು ನಿರ್ಲಿಪ್ತರಾಗಿದ್ದಂತೆ ಕಂಡುಬಂದರೆ, ಕೆಲವರು ಮಾತ್ರ ಅವರ ಸಹಾನುಭೂತಿಗೆ ಪಾತ್ರರಾಗಿದ್ದರು. ತಂದೆ

ತಾಯಿಗಳು ಕೂಡ ಇವರನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ (ಶೇ16.5). ಅವರೇ ಮಕ್ಕಳನ್ನು ಶೋಷಿಸುತ್ತಿದ್ದರು (ಶೇ.26.5) ತಾವು ದಿನವಿಡೀ ದುಡಿದೂ ಕೂಡ ತಮ್ಮ ತಂದೆತಾಯಿಗಳಿಂದ ಕಡೆಗಣಿಸಲ್ಪಟ್ಟದ್ದೇವೆನ್ನುವುದೇ ಇವರ ಮುಖ್ಯವಾದ ಅಹವಾಲು.

ಪೋಲೀಸರು ಮತ್ತು ಕಾರ್ಪೋರೇಷನ್ನಿನವರು ಇವರಿಗೆ ಒಂದಲ್ಲ ಒಂದು ರೀತಿಯ ಕಿರುಕುಳ ನೀಡುತ್ತಿದ್ದರು. ಇವರ ವಾಸಸ್ಥಾನಗಳ ಮೇಲೆ ನಿಯಮಿತವಾಗಿ ಧಾಳಿಮಾಡುತ್ತಿದ್ದರು. ಇವರ ಸಾಮಾಗ್ರಿಗಳನ್ನು ಹೊರಗೆಸೆಯುತ್ತಿದ್ದರು; ಕೆಟ್ಟ ಬಯ್ಗುಳಗಳನ್ನು ಬಳಸುತ್ತಿದ್ದರು; ಕೆಲವೊಮ್ಮೆ ಇವರನ್ನು ಹೊಡೆದೂ ಹೊಡೆಯುತ್ತಿದ್ದರು; ಸ್ಥಳೀಯ ಹುಡುಗರೂ ಇವರನ್ನು ಕೀಟಲೆಮಾಡುತ್ತಿದ್ದರು (ಶೇ 85.9). ಇಂಥ ಸಂದರ್ಭಗಳಲ್ಲಿ ದಾರಿಹೋಕರು ಅಥವಾ ಹತ್ತಿರದಲ್ಲಿ ವಾಸಿಸುವ ಮಂದಿ ಇವರ ನೆರವಿಗೆ ಬರುತ್ತಿದ್ದರು. ಬೆಳೆಯುತ್ತಿರುವ ಹೆಣ್ಣುಮಕ್ಕಳು ಬೀದಿ ಬದಿಯಲ್ಲಿ ವಾಸಿಸುವುದು ಅವಮಾನಕರ. ಅನುಕೂಲ ಮತ್ತು ರಕ್ಷಣೆಯ ದೃಷ್ಟಿಯಿಂದ ತಲೆಯ ಮೇಲೊಂದು ಉತ್ತಮ ಸೂರು ಅಗತ್ಯವೆಂದು ಹೆಚ್ಚಿನ ಹುಡುಗಿಯರು ಭಾವಿಸುತ್ತಾರೆ. (ಶೇ 86.7) ಸಮಾಜ ತನ್ನ ನಿರ್ಲಿಪ್ತತೆಯಿಂದ ಹೊರಬಂದು ತಮ್ಮಂಥವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಹಾಗೂ ಪುನರ್ವಸತಿಯನ್ನು ಕಲ್ಪಿಸಿಕೊಡುವುದು ಅದರ ಆದ್ಯ ಕರ್ತವ್ಯವಾಗಬೇಕು (ಶೇ 90.2) ನಾವು ನಮ್ಮ ಹಕ್ಕುಗಳಿಂದ ವಂಚಿತರಾಗಿದ್ದೇವೆ ಎನ್ನುವುದು ಅವರ ತೀವ್ರ ಅನ್ನಿಸಿಕೆಯಾಗಿತ್ತು.

ಆರೋಗ್ಯ :

ಹೆಚ್ಚು ಸಂಖ್ಯೆಯ ಹೆಣ್ಣುಮಕ್ಕಳು ಅನಾರೋಗ್ಯದಿಂದಿದ್ದರು (ಶೇ 58.5). ಕೆಲವೇ ಮಂದಿ ಹುಡುಗಿಯರು ಉತ್ತಮ ಆರೋಗ್ಯವನ್ನು ಹೊಂದಿದ್ದರು (ಶೇ 8.6) ಸಾಮಾನ್ಯ ಮಟ್ಟದ ಆರೋಗ್ಯವನ್ನು ಶೇ 32.9 ಮಂದಿ ಹೊಂದಿದ್ದರು. ಅನಾರೋಗ್ಯ, ಅಪೌಷ್ಟಿಕತೆ, ಕುಂಠಿತ ಬೆಳವಣಿಗೆಯನ್ನು ಹೊಂದಿದ್ದ ಇವರಿಗೆ ಯಾವುದೇ ವೈದ್ಯಕೀಯ ಸೌಲಭ್ಯವನ್ನು ಪಡೆಯುವ ಸಾಮರ್ಥ್ಯವಿರಲಿಲ್ಲ (ಶೇ 47.9). ಇನ್ನು ಕೆಲವರಿಗೆ ಸರಕಾರೀ ವೈದ್ಯಕೀಯ ಸೌಲಭ್ಯವನ್ನು ಪಡೆದುಕೊಳ್ಳಲು ಸಾಧ್ಯವಿದ್ದರೂ ವೈದ್ಯರ, ಆಸ್ಪತ್ರೆ ಸಿಬ್ಬಂದಿವರ್ಗ ಮತ್ತು ಸಾರ್ವಜನಿಕರ ದುರ್ನಡತೆಗಳಿಂದಾಗಿ ಅಲ್ಲಿಗೆ ಹೋಗಲು ಹಿಂಜರಿಯುತ್ತಿದ್ದರು. ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿದ್ದುದು ಕೇವಲ ಬೆರಳೆಣಿಕೆಯಷ್ಟು ಮಂದಿಗೆ ಮಾತ್ರ (ಶೇ. 2.9).

ಒಟ್ಟಿನಲ್ಲಿ ಹೇಳುವುದಾದರೆ ಮಾನವ ಬದುಕಿಗೆ ಅತ್ಯಗತ್ಯವಾದ ಪ್ರೀತಿ, ಪ್ರೇಮಗಳು ಇವರಿಗೆ ಕನಿಷ್ಠ ಪ್ರಮಾಣದಲ್ಲಿ ದೊರಕುತ್ತಿದ್ದು ಬದುಕುವ ಹಂಬಲ ಇವರಲ್ಲಿ ಎದ್ದು ಕಾಣುತ್ತಿತ್ತು. ಇನ್ನಷ್ಟು ಪ್ರಮಾಣದಲ್ಲಿ ಇವರಿಗೆ ಅಗತ್ಯವಾದ ಪ್ರೀತಿ ವಿಶ್ವಾಸಗಳು, ಸೌಲಭ್ಯಗಳು ದೊರಕಿದರೂ ತಮ್ಮ ಅಭಿವೃದ್ಧಿಗೆ ತಾವೇ ಶ್ರಮಿಸಲು ಶಕ್ತರಾಗುತ್ತಾರೆನ್ನುವುದು ಸಂಶೋಧಕರ ಅಭಿಪ್ರಾಯ.

ಒಟ್ಟಿನಲ್ಲಿ ಹೇಳುವುದಾದರೆ ಈ ಹೆಣ್ಣುಮಕ್ಕಳು ಬೀದಿ ಬದಿಯಲ್ಲಿ ವಾಸಿಸುವ ಅನಿವಾರ್ಯ ಪರಿಸ್ಥಿತಿಯಲ್ಲಿ ಅತಿ ಹೆಚ್ಚು ದೌರ್ಜನ್ಯಕ್ಕೊಳಗಾಗುವ, ಶೋಷಣೆಗೊಳಗಾಗುವ ವರ್ಗವಾಗಿದ್ದಾರೆ. ಅತಿ ದುಡಿಮೆಯಿಂದ ದೈಹಿಕವಾಗಿ ಬಳಲಿದರೆ, ಸಮಾಜ ವಿರೋಧಿಶಕ್ತಿಗಳಿಂದ ಹಲವು ರೀತಿಯ ಮಾನಸಿಕ ಒತ್ತಡ ನೋವುಗಳನ್ನನುಭವಿಸುತ್ತಾ, ಕೋಪ-ಹತಾಶೆ ತಿರಸ್ಕಾರ ಭಾವನೆಗಳ ಮಡುವಾಗಿರುತ್ತಾರೆ. ಇವರಲ್ಲಿರುವ ಸೃಜನಶೀಲತೆಗೆ ಪೋಷಣೆಯಾಗಲೀ, ಅಭಿವ್ಯಕ್ತಿಗೆ ಅವಕಾಶವಾಗಲೀ ಸಂಪೂರ್ಣವಾಗಿ ದೊರಕದೆ ಹೇಳಹೆಸರಿಲ್ಲದಂತಾಗುತ್ತಾರೆ. ಸಮಾಜದಿಂದ ಕೇವಲ ನೋವನ್ನು, ದೌರ್ಜನ್ಯವನ್ನು ಮಾತ್ರ ಅನುಭವಿಸುವ ಇವರಿಗೆ ಸರಕಾರ ಹಾಕಿಕೊಂಡ ಯಾವುದೇ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಂದಾಗಲೀ, ವಿಶೇಷವಾಗಿ ಮಹಿಳೆಯರಿಗಾಗಿಯೇ ಇರುವ ಮಹಿಳಾಭಿವೃದ್ಧಿ ಕಾರ್ಯಕ್ರಮಗಳಿಂದಾಗಲೀ ಯಾವುದೇ ಪ್ರಯೋಜನವಾದಂತೆ ಕಂಡುಬರುವುದಿಲ್ಲ. ಕೇವಲ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರಿಂದಲೇ ಮಹಿಳಾಭಿವೃದ್ಧಿ, ಮಹಿಳಾ ಸಶಕ್ತೀಕರಣಗಳು ಆಗಿಬಿಡುತ್ತವೆಂದು ನಂಬುವ ಸರಕಾರಗಳು ವಾಸ್ತವತೆಗೆ ಕಣ್ಣುತೆರೆದು ಕ್ರಿಯಾಶೀಲವಾಗುವುದು ಅತ್ಯವಶ್ಯ.

- ವೆಂ. ವನಜ

ಪೊಲೀಸರ ವಿರುದ್ಧ ಲೈಂಗಿಕ ಶೋಷಿತ ಮಹಿಳೆಯರ ಸಮರ

ಪೊಲೀಸ್ ವ್ಯವಸ್ಥೆಯು ಇಂದು ಇಡೀ ಸಮಾಜದ ಪಾಲಿಗೆ ಒಂದು ಭಯಾನಕ ಸಾಂಕ್ರಾಮಿಕದಂತೆ ಭಾಸವಾಗುತ್ತಿದೆ. ಬಡ ಭಾರತೀಯರನ್ನು ಬಗ್ಗು ಬಡಿಯಲು ಬ್ರಿಟಿಷರು ರೂಪಿಸಿದ 250 ವರ್ಷಗಳಷ್ಟು ಹಳೆಯದಾದ ಪೊಲೀಸ್ ವ್ಯವಸ್ಥೆಯನ್ನು ರಾಜಕೀಯ ಸ್ವಾತಂತ್ರ್ಯ ನಂತರವೂ ಯಥಾವತ್ತಾಗಿ ಮುಂದುವರಿಸಿಕೊಂಡು ಬರುತ್ತಿರುವುದು, ಅದರ ಎಲ್ಲ ದುಷ್ಪರಿಣಾಮಗಳಿಗೆ ಕಾರಣವಾಗಿ ಭಾದಿಸುತ್ತಿದೆ. ಕರ್ನಾಟಕ ಗಡಿ ಜಿಲ್ಲೆ ಬೆಳಗಾಂನ ಕರ್ನಾಟಕ ಮಹಾರಾಷ್ಟ್ರ ಗಡಿಯಲ್ಲಿರುವ ನಿಪ್ಪಾಣಿ ಪಟ್ಟಣದಲ್ಲಿ ಕಳೆದ ಕೆಲವು ವರ್ಷಗಳಿಂದ ಕಾರ್ಯನಿರತರಾಗಿರುವ ''ವೇಶ್ಯಾ ಅನ್ಯಾಯ ಮುಕ್ತಿ ಪರಿಷತ್'' (VAMP) ಮತ್ತು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಕೇಂದ್ರಿಕೃತವಾಗಿರುವ ''ಸಂಗ್ರಾಮ್'' ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರಿಗೆ ಇತ್ತೀಚೆಗೆ ಪೊಲೀಸರು ನಿರಂತರವಾಗಿ ಹಿಂಸೆ ನೀಡುತ್ತಿರುವುದನ್ನು ಬಹುಶಃ ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ ಅತ್ಯಧಿಕ ಸಂಖ್ಯೆಯಲ್ಲಿ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಮಹಿಳೆಯರು ಮತ್ತು ಕಾರ್ಯಕರ್ತರು ಒಗ್ಗೂಡಿ ಭಾರಿ ಪ್ರತಿಭಟನೆ ನಡೆಸಿದರು.

ನಿಪ್ಪಾಣಿ ಪಟ್ಟಣವು ಬಹುತೇಕ ಮರಾಠಿ ಭಾಷಿಕರನ್ನು ಹೊಂದಿರುವ ಕರ್ನಾಟಕದಲ್ಲಿರುವ ಪಟ್ಟಣವಾಗಿದೆ. ಇದು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4ರಲ್ಲಿ ಇರುವ ಪಟ್ಟಣವಾಗಿದ್ದು, ಸಹಜವಾಗಿಯೇ ಅನೇಕ ಬಡ ಮಹಿಳೆಯರು ಜೀವನೋಪಾಯಕ್ಕಾಗಿ ಇಲ್ಲಿ ವೇಶ್ಯಾವೃತ್ತಿಯಲ್ಲಿ ತೊಡಗಿದ್ದಾರೆ. ಇದು ಅನೇಕ ವರ್ಷಗಳಿಂದ ನಡೆಯುತ್ತಿರುವ ಪ್ರಕ್ರಿಯೆಯಾಗಿದ್ದು, ಇತ್ತೀಚೆಗೆ ಸಾಂಗ್ಲಿ ಮೂಲಕ ''ಸಂಗ್ರಾಮ್'' ಎನ್ನುವ ಸಂಸ್ಥೆಯ ಮಾರ್ಗದರ್ಶನದಡಿಯಲ್ಲಿ ''ವೇಶ್ಯಾ ಅನ್ಯಾಯ ಮುಕ್ತಿ ಪರಿಷತ್'' ಎನ್ನುವ ಹೆಸರಿನಲ್ಲಿ ಸಂಘಟಿತರಾಗುತ್ತಿದ್ದಾರೆ. ಈ ಮಹಿಳೆಯರನ್ನು ನೂರಾರು ವರ್ಷಗಳಿಂದ ಶೋಷಣೆ ಪಡಿಸುತ್ತಾ ಬಂದಿರುವ ಶ್ರೇಣೀಕೃತ ವ್ಯವಸ್ಥೆಯಲ್ಲಿ ನಕಿನೆಪದರಿನ ಜನ, ಈಗ ಮಹಿಳೆಯರು ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ ಪ್ರದಿಪಾದಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಅದನ್ನು ಸಹಿಸಲು ಸಾಧ್ಯವಾಗದೆ ವೇಶ್ಯಯರ ಸಂಘಟನೆಯನ್ನು ಒಡೆಯಲು ಮತ್ತು ಅವರಲ್ಲಿ ಭಯದ ವಾತಾವರಣ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನದ ಮುಂಚೂಣಿಯಲ್ಲಿ ಹಿಂದೂ ಶ್ರೇಣೀಕೃತ ವ್ಯವಸ್ಥೆಯ ಉಗ್ರ ಪ್ರದಿಪಾದಕ ಸಂಘಟನೆ ಶಿವಸೇನೆಯು ಕಾಣಿಸಿಕೊಂಡಿದೆ.

ಶಿವಸೇನೆಯ ಸ್ಥಳೀಯ ನಾಯಕರು ವೇಶ್ಯಾವೃತ್ತಿಯಲ್ಲಿ ತೊಡಗುವ ಮಹಿಳೆಯರು ದ್ವಿತೀಯ ದರ್ಜೆಯ ನಾಗರೀಕರಂತೆ ನಡೆದುಕೊಳ್ಳುವಂತೆ ತಮ್ಮ ಆದೇಶಗಳನ್ನು ಪಾಲಿಸುವಂತೆ ಒತ್ತಾಯಿಸುತ್ತಿದ್ದಾರೆ. ಈ ಸಂಬಂಧ ದೂರು ನೀಡಲು ಪೊಲೀಸ್ ಠಾಣೆಗೆ ತೆರಳಿದ VAMPನ ಕಾರ್ಯಕರ್ತರು ಸಂಗ್ರಾಮ್ ಸಂಸ್ಥೆಯ ಸದಸ್ಯರು ಮತ್ತು ಕೆಲವು ಪತ್ರಕರ್ತರು ಠಾಣೆಯ ಇನ್ಸ್‌ಪೆಕ್ಟರ್ ಸುರೇಶ್ ಕಾರಿಟ್ ಎಂಬುವವರು ಅತ್ಯಂತ ಹೀನಾಯವಾಗಿ ನಡೆಸಿಕೊಂಡಿದ್ದಲ್ಲದೆ ಅಸಭ್ಯವಾಗಿ ವರ್ತಿಸಿ, VAMPನ ಕಾರ್ಯಕರ್ತರು ಮತ್ತು ಸಂಗ್ರಾಮ್‌ನ ಸದಸ್ಯರಿಗೆ ಅತ್ಯಾಚಾರ ನಡೆಸುವ ಬೆದರಿಕೆ ಒಡ್ಡಿದ್ದಾರೆ ಮತ್ತು ವೇಶ್ಯಾವೃತ್ತಿಯಲ್ಲಿ ತೊಡಗಿರುವ ಮಹಿಳೆಯರಿಂದ ದೂರು ಪಡೆಯಲು ನಿರಾಕರಿಸಿ, ವೇಶ್ಯೆಯರಿಗೆ ದೂರು ನೀಡುವ ಅಧಿಕಾರವಿಲ್ಲವೆಂದು ವಾದಿಸಿದ್ದಾರೆ. ಇದಕ್ಕೆಲ್ಲಾ ಸಾಕ್ಷಿಯಾಗಿದ್ದ ಟೈಂಸ್ ಆಫ್ ಇಂಡಿಯಾದ ಪತ್ರಕರ್ತರನ್ನು ಬೆದರಿಸಿದ್ದಾರೆ. ಈ ನಡುವೆ ಶಿವಸೇನೆಯ ಭಯೋತ್ಪಾದಕರು ನಿಪ್ಪಾಣಿಯಿಂದ ವೇಶ್ಯಾವೃತ್ತಿಯಲ್ಲಿರುವ ಮಹಿಳೆಯರನ್ನು ಬಲವಂತವಾಗಿ ಹಲ್ಲೆ ನಡೆಸುವುದರ ಮೂಲಕ ಹೊರಹಾಕಿದ್ದರು.

ಇದೆಲ್ಲದರ ಹಿನ್ನಲೆಯಲ್ಲಿ ಸಂಗ್ರಾಮ್ ಸಂಸ್ಥೆಯ ಮೀನಾ ಸೇಷುರವರು ಭಾರತದಾದ್ಯಂತ ವಿವಿಧ ಜನಪರ ಮತ್ತು ಮಹಿಳಾ ಸಂಘಟನೆಗಳನ್ನು ಸಂಘಟಿಸಿ ಪೊಲೀಸರ ವಿರುದ್ದ ಕ್ರಮಕೈಗೊಳ್ಳಲು ಮತ್ತು ನಿಪ್ಪಾಣಿಯಲ್ಲಿ ವೇಶ್ಯಾ ವೃತ್ತಿಯಲ್ಲಿ ತೊಡಗಿರುವ ಮಹಿಳೆಯರು ದಿನನಿತ್ಯದ ಚಟುವಟಿಕೆಯಲ್ಲಿ ತೊಡಗಿಕೊಳ್ಳಲು ಅನುವಾಗುವಂತೆ ಅವರಿಗೆ ರಕ್ಷಣೆ ನೀಡುವಂತೆ ಸರ್ಕಾರವನ್ನು ಒತ್ತಾಯಿಸಲು ಕೋರಿದ್ದರು. ಬೆಂಗಳೂರಿನಲ್ಲಿ ಮಹಿಳೆಯರ ಹಕ್ಕುಗಳ ಕುರಿತು ಕೆಲಸಮಾಡುತ್ತಿರುವ ಮತ್ತು ಲೈಂಗಿಕ ವೃತ್ತಿಯಲ್ಲಿರುವವರೊಂದಿಗೆ ಕೆಲಸ ಮಾಡುತ್ತಿರುವ ಮತ್ತು ಕೆಲವು ಸಂಘಟನೆಗಳು ಒಂದಾಗಿ ಈ ನಿಮಿತ್ತ ಪೊಲೀಸ್ ಮಹಾ ನಿರ್ದೇಶಕರು, ಗೃಹ ಕಾರ್ಯದರ್ಶಿಗಳು, ಡಿಜಿಪಿ ಮಾನವ ಹಕ್ಕುಗಳು, ಐಜಿಪಿ ಕಾನೂನು ಮತ್ತು ಸುವ್ಯವಸ್ಥೆ, ಗೃಹ ಮಂತ್ರಿಗಳು, ಮುಂತಾದವರನ್ನು ಬೇಟಿ ಮಾಡಿ ದೌರ್ಜನ್ಯ ಎಸಗಿದ ಪೊಲೀಸರ ವಿರುದ್ದ ಮತ್ತು ಮಹಿಳೆಯರಿಗೆ ತೊಂದರೆ ನೀಡುತ್ತಿರುವವರ ವಿರುದ್ದ ಕ್ರಮಕೈಗೊಳ್ಳುವಂತೆ ಕೇಳಿಕೊಂಡರೂ ಸಹ ಯಾರೂ ಸರಿಯಾಗಿ ಸ್ಪಂದಿಸದ ಕಾರಣ ಅಂತಿಮವಾಗಿ ಪ್ರತಿಭಟನೆ ಕೈಗೊಳ್ಳಲು ತೀರ್ಮಾನಿಸಲಾಯಿತು. ಏಪ್ರಿಲ್ 9 ರಂದು ಮಹಾರಾಷ್ಟ್ರದ

ಸಾಂಗ್ಲಿಯಲ್ಲಿ ಸಾವಿರಾರು ಸಂಖ್ಯೆಯ ವೇಶ್ಯಾವೃತ್ತಿಯಲ್ಲಿರುವ ಮಹಿಳೆಯರು, ಕಾರ್ಯಕರ್ತರು ಮತ್ತು ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಸೇರಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ನಂತರ ಸಭೆ ನಡೆಸಲಾಯಿತು. ಮರುದಿವಸ ನಿಪ್ಪಾಣಿಯಲ್ಲಿ ಪ್ರತಿಭಟನೆ ಯೋಜಿಸಿದ್ದರೂ ಪೊಲೀಸರು ಅನುಮತಿಸದ ಕಾರಣ ಸಾಂಕೇತಿಕವಾಗಿ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ಮತ್ತು ಸಭೆ ನಡೆಸಲಾಯಿತು. ನಿಪ್ಪಾಣಿಯಲ್ಲಿ ಕೂಡ ಅನೇಕ ಪ್ರಗತಿಪರ ಸಂಘಟನೆಗಳು ಪಾಲ್ಗೊಂಡು ಸಾಕಷ್ಟು ಬೆಂಬಲ ವ್ಯಕ್ತಪಡಿಸಿದ್ದರು. ನಂತರ ಅದೇ ದಿನ ಸಂಜೆ ಬೆಳಗಾವಿಯ ಮುಖ್ಯ ಬೀದಿಯಲ್ಲಿ ಮೆರವಣಿಗೆ ನಡೆಸಿ ನಂತರ ಬೆಳಗಾಯಿಯ ಐಜಿಪಿಯವರ ಕಛೇರಿಯ ಮುಂದೆ ಧರಣಿ ನಡೆಸಲಾಯಿತು. ಐಜಿಪಿಯವರು ಊರಿನಲ್ಲಿರದ ಕಾರಣ ಹಿರಿಯ ಪೋಲೀಸ್ ಅಧಿಕಾರಿಯೊಬ್ಬರು ತಪ್ಪಿತಸ್ಥರ ವಿರುದ್ಧ ಕ್ರಮ ಕೈಕೊಳ್ಳುವುದಾಗಿ ಮತ್ತು ಐಜಿಪಿಯವರೊಂದಿಗೆ ಬೇಟಿ ಮಾಡಿಸುವುದಕ್ಕೂ ಭರವಸೆ ನೀಡಿದರು.

ಸಾವಿರಾರು ಸಂಖ್ಯೆಯ ವೇಶ್ಯಾವೃತ್ತಿಯಲ್ಲಿರುವ ಮಹಿಳೆಯರು ಮೊದಲ ಬಾರಿಗೆ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದು ಕರ್ನಾಟಕದ ಮಟ್ಟಿಗೆ ವಿಶೇಷವಾಗಿತ್ತು. ಇಷ್ಟೆಲ್ಲಾ ಪ್ರತಿಭಟನೆ ಮತ್ತು ಮೆರವಣಿಗೆಗಳ ನಂತರವೂ ಪೋಲೀಸರು ಏನೂ ಕ್ರಮ ಕೈಗೊಳ್ಳದಿರುವುದು, ಒಂದು ದೊಡ್ಡ ದುರಂತವಾಗಿದೆ. ಇದರ ಮಟ್ಟಿಗೆ ವೇಶ್ಯಾವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಬೆಂಗಳೂರಿನಲ್ಲಿ ಸಹ ಒಗ್ಗೂಡುತ್ತಿರುವುದು ಶುಭಸೂಚಕವಾಗಿದೆ. ನಾಗರೀಕ ಹಕ್ಕುಗಳನ್ನು ನಿರಾಕರಿಸುತ್ತಿರುವುದರ ಕುರಿತು ಗಂಭೀರ ಚರ್ಚೆಗಳಾಗಬೇಕಾಗಿದೆ. ಈ ರೀತಿಯ ಘಟನೆಗಳು ದೇಶದೆಲ್ಲಡೆ ನಡೆಯುತ್ತಿರುವುದು ನಿರಂತರ ಪ್ರಕ್ರಿಯೆಯಾಗಿದೆ. ಪ್ರಭುತ್ವವು ಬಂಡವಾಳ ಶಾಹಿಗಳು ಮತ್ತು ಕೋಮುವಾದಕ್ಕೆ ಬೆಂಬಲ ನೀಡುತ್ತಿರುವುದರಿಂದ ಪೊಲೀಸ್ ವ್ಯವಸ್ಥೆಯನ್ನು ಕ್ರೂರತ್ವ ತುಂಬಿದ ವ್ಯವಸ್ಥೆಯನ್ನಾಗಿ ರೂಪಿಸಲಾಗುತ್ತಿದೆ. ಬಡಜನರ ಕೂಗನ್ನು ಧಮನಿಸಲು ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಅನುಸರಿಸಲಾಗುತ್ತಿದೆ. ನಿಪ್ಪಾಣಿಯ ಘಟನೆಗಳು ಕೂಡ ಕೋಮುವಾದಿ ಮತ್ತು ಬಂಡವಾಳಶಾಹಿಗಳ ಜಂಟಿ ಕಾರ್ಯಾಚರಣೆಯ ಒಂದು ಉದಾಹರಣೆಯಾಗಿದೆ.

- ನಾಪಂಡ ಎಂ. ಮುದ್ದಪ್ಪ

ಹೆಣ್ತನ

ಹೆಣ್ಣು ಜನುಮವೆ ಹೀಗೆ
ಬಗೆಹರಿಸಲಾಗದ ಒಗಟು
ತನ್ನವರ ಏಳಿಗೆಗಾಗೇ
ತನ್ನತನವ ಮರೆತು
ಹಿರಿತನವ ಮೆರೆವಳಿವಳು
ನದಿ ನೀರು ಸಿಹಿಯಾದ್ರು
ಸಾಗರವ ಸೇರಿ ಉಪ್ಪಾದಂತೆ
ತನ್ನಾಸೆಗಳೇನಿರೆ ಕೂಡ
ಕಟ್ಟಿಕೊಂಡವ ಬಯಸಿದಂತೆ ಬದುಕು
ಗಂಧ ತೇಯ್ದರು ಕೂಡ ಸುವಾಸನೆ
ಬತ್ತಿ ಉರಿದರೂ ಸಹ ಬೆಳಕೆ
ತಾನೊಂದಿರೆ ಕೂಡ
ಸುಖ ಸಂತೋಷವೇ ಕೊಡುವ
ಹೆಣ್ಣು ಬಾಳಿನ ಕಣ್ಣು

- ಅನಿತಾ ಹಾಸನ

ಅರಸುತ್ತಾ ಹೊರಟೆ....

ಅರಸುತ್ತಾ ಹೊರಟೆ
ಆತನನ್ನು ನಾನು
ಆತ ಶಿಲುಬೆಯ ಮೇಲಿರಲಿಲ್ಲ
ವಿಗ್ರಹಗಳಿದ್ದ ದೇವಾಲಯಗಳಲ್ಲೂ ಇರಲಿಲ್ಲ
ಪುರಾತನ ಪಗೋಡಾಗಳಲ್ಲಿಯೂ ಆತನ ಸುಳಿವಿರಲಿಲ್ಲ
ಕಾಬಾದ ನರನಾಡಿಗಳಲ್ಲಿ ಆತ ಕಾಣಲಿಲ್ಲ
ಶಿಶುವಿಹಾರಗಳಲ್ಲಾಗಲಿ, ವೃದ್ಧಾಶ್ರಮಗಳಲ್ಲಾಗಲಿ
ಆತ ಇರಲೇ ಇಲ್ಲ
ಇಬನ್ ಸಿನಾನನ್ನು ಕೇಳಿದೆ
ಆತನ ರಾಜ್ಯದಲ್ಲಿರುವನೇ ಎಂದು
ಅಲ್ಲಿಯೂ ಸಿಗಲಿಲ್ಲ
ಬಳಲಿದ ನಾನು
ತಡಕಾಡಿದೆ ನನ್ನ ಎದೆಯೊಳಗೆ
ಆತ ಮತ್ತೆಲ್ಲೂ ಇರಲಿಲ್ಲ, ನನ್ನಲ್ಲೆ ಇದ್ದ

- ರೂಮಿ

ತೀವ್ರವಾಗುತ್ತಿರುವ ಗುತ್ತಿಗೆ ಪೌರ ಕಾರ್ಮಿಕರ ಹೋರಾಟ

ಗುತ್ತಿಗೆ ಪೌರಕಾರ್ಮಿಕರ ಹೋರಾಟ ಕುರಿತಂತೆ ಮಾನಸದ ಫೆಬ್ರವರಿ ತಿಂಗಳ ಸಂಚಿಕೆಯಲ್ಲಿ ವಿವರವಾಗಿ ಪ್ರಕಟಿಸಿದ್ದೇವೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟವನ್ನು ಬೆಂಬಲಿಸಲು ಅನೇಕ ಮಹಿಳಾ ಸಂಘಟನೆಗಳು, ಮಾನವ ಹಕ್ಕುಗಳ ಸಂಘಟನೆಗಳು, ಸರ್ಕಾರೇತರ ಸಂಸ್ಥೆಗಳು, ಕಲಾವಿದರು, ಚಲನಚಿತ್ರ ಮತ್ತು ಟಿ.ವಿ. ಮಾಧ್ಯಮದವರು ಹಾಗು ಇನ್ನಿತರ ವ್ಯಕ್ತಿಗಳು ಒಟ್ಟಾಗಿ ಗುತ್ತಿಗೆ ಪೌರಕಾರ್ಮಿಕರ ಬೆಂಬಲ ಗುಂಪೊಂದನ್ನು ಪ್ರಾರಂಭಿಸಿದ್ದು, ಮಾನಸ ಅದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟ ತೀವ್ರಗೊಂಡಿದ್ದು ಫೆಬ್ರವರಿ ನಂತರ ನಡೆದ ಹೋರಾಟದ ವಿವರಗಳನ್ನು ಇಲ್ಲಿ ದಾಖಲಿಸಲಾಗಿದೆ.

ಕರ್ನಾಟಕ ಸರ್ಕಾರ ನಗರ ಪಾಲಿಕೆಯ ಸ್ವಚ್ಛತಾ ಕೆಲಸಕ್ಕೆ ಇನ್ನೂ ಕನಿಷ್ಠ ವೇತನವನ್ನು ನಿಗದಿಪಡಿಸಿಲ್ಲ. ಕನಿಷ್ಠ ವೇತನವನ್ನು ಗುತ್ತಿಗೆ ಪೌರಕಾರ್ಮಿಕರಿಗೆ ನೀಡಬೇಕೆಂದು (ಇಂತಿಷ್ಟು ಎಂದು ನಮೂದಿಸಿದೆ) ಪಾಲಿಕೆಯ ಆಯುಕ್ತರು ಎರಡೆರಡು ಆದೇಶಗಳನ್ನು ನೀಡಿದರು. ಪಾಲಿಕೆಯ ಆಯುಕ್ತರು ಮತ್ತು ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ಖಾಯಂ ನೌಕರರ ಸಂಘ ಮತ್ತು ಗುತ್ತಿಗೆ ಪೌರಕಾರ್ಮಿಕ ಸಂಘದೊಡನೆ ಹಲವಾರು ಸಭೆಗಳಾದ ನಂತರ ತಿಳಿದು ಬಂದಿದ್ದೇನೆಂದರೆ ಸರ್ಕಾರವಿನ್ನು ಕನಿಷ್ಠ ವೇತನವನ್ನು ನಿಗದಿ ಮಾಡಿಲ್ಲವೆಂಬುದು! ಕನಿಷ್ಠ ವೇತನವಿನ್ನೂ ನಿಗದಿಯಾಗಿಲ್ಲವಾದ್ದರಿಂದ ತಾತ್ಕಾಲಿಕ ಪರಿಹಾರದ ಮೊತ್ತವನ್ನು ನಿಗದಿಪಡಿಸಲು ಹಲವು ಸಭೆಗಳು ನಡೆದು, ಅಂತಿಮವಾಗಿ ದಿನಾಂಕ 25-01-02 ರಂದು ನಡೆದ ಸಭೆಯಲ್ಲಿ ಒಂದು ಒಪ್ಪಂದಕ್ಕೆ ಬರಲಾಯಿತು. ಈ ಎಲ್ಲ ಸಭೆಗಳಿಗೂ ಗುತ್ತಿಗೆದಾರರು ಬರಲಿಲ್ಲ. ಒಪ್ಪಂದದ ಪ್ರಕಾರ ಕನಿಷ್ಠ ವೇತನ ಜಾರಿಯಾಗುವವರೆಗೂ ಪ್ರತಿ ತಿಂಗಳು ತಾತ್ಕಾಲಿಕ ಪರಿಹಾರ ರೂ. 1550/-ನ್ನು, 12ನೇ ತಾರೀಖಿನೊಳಗೆ, ಆರೋಗ್ಯಾಧಿಕಾರಿಗಳ ಸಮ್ಮುಖದಲ್ಲಿ ನೀಡಬೇಕು, ಕಾರ್ಮಿಕರಿಗೆ ವೇತನಪಟ್ಟಿ ನೀಡಬೇಕು, ಬುಧವಾರ ಮತ್ತು ಭಾನುವಾರ ಅರ್ಧ ದಿನದ ರಜೆ ನೀಡಬೇಕು, ಗುರುತಿನ ಚೀಟಿ ನೀಡಬೇಕು. ಈ ಒಪ್ಪಂದಕ್ಕೆ ಗುತ್ತಿಗೆ ಪೌರಕಾರ್ಮಿಕರ ಪರವಾಗಿ ಪಾಲಿಕೆಯ ಖಾಯಂ ನೌಕರರ ಸಂಘದವರು ಸಹಿ ಹಾಕಿದ್ದಾರೆ. ಗುತ್ತಿಗೆದಾರರು ಮಾತ್ರ ಕಾರ್ಮಿಕರ ಜೊತೆ ಕೂತು ಸಹಿ ಹಾಕುವುದು ಅವಮಾನವೆಂದು ಪ್ರತ್ಯೇಕವಾಗಿ ಸಹಿ ಹಾಕಿದರು.

ಈ ಒಪ್ಪಂದದ ನಂತರ ಪಾಲಿಕೆಯ ಆಯುಕ್ತರು, ಗುತ್ತಿಗೆ ಪೌರ ಕಾರ್ಮಿಕರಿಗೆ ಜನವರಿ ತಿಂಗಳಿಂದಲೇ ರೂ. 1550/-ನ್ನು ನೀಡಬೇಕೆಂದು, ಕಡಿಮೆ ನೀಡಿದಲ್ಲಿ ವ್ಯತ್ಯಾಸದ ಮೊತ್ತವನ್ನು ಗುತ್ತಿಗೆದಾರರ ಬಿಲ್ಲಿನಿಂದಲೇ ಕಟಾವು ಮಾಡಿ ನೀಡಬೇಕೆಂದು, ಇದನ್ನು ಜಾರಿಗೊಳಿಸದ ಆರೋಗ್ಯಾಧಿಕಾರಿಗಳ ವಿರುದ್ಧ ಶಿಸ್ತಿನಕ್ರಮ ಜರುಗಿಸಲಾಗುವುದೆಂದು ದಿನಾಂಕ 22-03-02 ರಂದು ಆದೇಶ ನೀಡಿದರು.

ಈ ಆದೇಶದ ನಂತರವೂ ಯಾವ ಕಾರ್ಮಿಕರಿಗೂ ತಾತ್ಕಾಲಿಕ ಪರಿಹಾರ ಜಾರಿಗೊಳಿಸದಿದ್ದ ಕಾರಣ, ಮಾರ್ಚ್ ತಿಂಗಳ ಕೊನೆಯಲ್ಲಿ ಗುತ್ತಿಗೆ ಪೌರ ಕಾರ್ಮಿಕರ ಸಂಘದವರು ಪಾಲಿಕೆಯ ಕಛೇರಿಯ ಆವರಣದಲ್ಲಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ನಡೆಸಿದರು. ಇದೇ ಸಮಯದಲ್ಲಿ ಅದೇಶ ನೀಡಿದ ಆಯುಕ್ತರಾದ ಅಶೋಕ್ ದಳವಾಯಿಯವರು ವರ್ಗವಾಗಿ ಅವರ ಸ್ಥಾನಕ್ಕೆ ಹಿರಿಯ ಐ.ಎ.ಎಸ್. ಅಧಿಕಾರಿ ಶ್ರೀನಿವಾಸ ಮೂರ್ತಿಯವರು ಹೊಸದಾಗಿ ನೇಮಕಗೊಂಡರು. ಏಳು ದಿನಗಳವರೆಗೂ ಧರಣಿಗೆ ಪಾಲಿಕೆಯಿಂದ ಯಾವ ಪ್ರತಿ ಕ್ರಿಯೆಯೂ ಬರಲಿಲ್ಲ. ಏಳನೆಯ ದಿನ ಕಾರ್ಮಿಕರ ಒತ್ತಡಕ್ಕೆ ಮಣಿದು ಆಯುಕ್ತರನ್ನು ಭೇಟಿ ಮಾಡಲು ಅವಕಾಶ ನೀಡಲಾಯಿತು. ಆಯುಕ್ತರು, ಹೊಸದಾಗಿ ಬಂದಿರುವುದರಿಂದ ಎಲ್ಲವನ್ನು ಪರಿಶೀಲಿಸಿ ಸೂಕ್ತ ಕ್ರಮತೆಗೆದುಕೊಂಡು ತಾತ್ಕಾಲಿಕ ಪರಿಹಾರವನ್ನು ಆದಷ್ಟು ಶೀಘ್ರವಾಗಿ ಜಾರಿಗೊಳಿಸಲಾಗುವುದೆಂದು ಆಶ್ವಾಸನೆ ಇತ್ತರು.

ಆಶ್ವಾಸನೆಯ ನಂತರವೂ ತಾತ್ಕಾಲಿಕ ಪರಿಹಾರ ಜಾರಿಗೊಳ್ಳದಿದ್ದರಿಂದ ಮೇ 2 ರಂದು ತಾತ್ಕಾಲಿಕ ಪರಿಹಾರಕ್ಕಾಗಿ ಒತ್ತಾಯಿಸಿ ಕಾರ್ಮಿಕರು ಕೆಲಸ ನಿಲ್ಲಿಸಿ ಧರಣಿಕೂತರು. ಧರಣಿ ಕೂತ ಕಾರ್ಮಿಕರಿಗೆ ಪಾಲಿಕೆಯ ಆಯುಕ್ತರು ಮತ್ತು ಮಹಾಪೌರರು ತುರ್ತು ಕೆಲಸವಿರುವುದರಿಂದ ಸಂಜೆ 4 ಗಂಟೆಗೆ ಭೇಟಿಯಾಗಿ ಮಾತುಕತೆ ನಡೆಸುವುದಾಗಿ ಹೇಳಿ ಹೋದರು. ಸಂಜೆ 6 ಘಂಟೆಯಾದರೂ ಯಾರೂ ಪತ್ತೆ ಇಲ್ಲ. ಧೃತಿಗೆಡದ ಕಾರ್ಮಿಕರು ಪಾಲಿಕೆಯ ಕಛೇರಿಯ ಬಾಗಿಲನ್ನು ಬಿಟ್ಟು ಮೇಲೇಳಲಿಲ್ಲ. ಹೋರಾಟದ ಹಾಡುಗಳನ್ನು ಹಾಡುತ್ತ ಕೂತರು. ಹಲವಾರು ಮಹಿಳಾ ಸಂಘಟನೆಗಳು, ಸರ್ಕಾರೇತರ ಸಂಸ್ಥೆಗಳು, ವ್ಯಕ್ತಿಗಳು ಕಾರ್ಮಿಕರಿಗೆ ಬೆಂಬಲವಾಗಿ ಅವರೊಂದಿಗಿದ್ದರು. ಗಾಂಧಿ ಪ್ರತಿಷ್ಠಾನದ ಶ್ರೀ ಸತ್ಯವ್ರತರವರು, ಹಿರಿಯ ಚಿಂತಕರಾದ ಶ್ರೀ ಜಿ. ರಾಮಕೃಷ್ಣರವರು ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ಮಾತನಾಡಿದರು. 7 ಗಂಟೆಯಾದರೂ ಆಯುಕ್ತರು ಇನ್ನು ಬಂದಿಲ್ಲವೆಂಬ ಉತ್ತರವೆ ಸಿಗುತ್ತಿದ್ದರಿಂದ ಅನುಮಾನ ಬಂದು ಒಳಗೆ ಹೋಗಿ ನೋಡಿದಾಗ ಆಯುಕ್ತರು ಒಳಗೇ ಇದ್ದುದು ತಿಳಿದು ಬಂತು. ನಂತರ ಸಂಘದವರು, ಬೆಂಬಲ ಗುಂಪಿನವರು ಆಯುಕ್ತರನ್ನು ಭೇಟಿಯಾಗಲೇಬೇಕೆಂದು ಪಟ್ಟು ಹಿಡಿದಾಗ ಭೇಟಿಗೆ ಅವಕಾಶ ನೀಡಲಾಯಿತು. ಆಯುಕ್ತರು ಮತ್ತು ಆರೋಗ್ಯಾಧಿಕಾರಿಗಳ ಸಮ್ಮುಖದಲ್ಲಿ ಮಾತುಕತೆ ನಡೆಯಿತು. ಆಯುಕ್ತರು ತಾವು ಒಂದೊಂದೇ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಬಗೆ ಹರಿಸಲು ಪ್ರಯತ್ನ ಮಾಡುತ್ತಿರುವುದಾಗಿಯೂ, ತಾತ್ಕಾಲಿಕ ಪರಿಹಾರ ಜಾರಿಗೊಳಿಸುವುದು ತಕ್ಷಣದ ಆದ್ಯತೆಯಾಗಿರುವುದರಿಂದ ಇತರ

ಸಮಸ್ಯೆಗಳನ್ನು ನಂತರ ತೆಗೆದುಕೊಳ್ಳುವುದಾಗಿ ಹೇಳಿದರು. ಅದೇ ಸಭೆಯಲ್ಲಿ ಆರೋಗ್ಯಾಧಿಕಾರಿಯೊಬ್ಬ ಸಂಘದವರು ಹೊರಹೋದರೆ ಮಾರನೆಯ ದಿನದಿಂದಲೇ 1550/- ರೂ ನೀಡುವೆನೆಂದು ಹೇಳಿದ! ಆಯುಕ್ತರ ಆಶ್ವಾಸನೆಯನ್ನು ನಂಬಿ ಅಂದು ಧರಣಿ ಮುಕ್ತಾಯಗೊಳಿಸಿದಾಗ ರಾತ್ರಿ 8-45. ಊಟಮಾಡದೆ ಧರಣಿ ಕೂತಿದ್ದ ಕಾರ್ಮಿಕರಿಗೆ ಜೈ ಎನ್ನಲೇಬೇಕು.

ಬಡ ಕಾರ್ಮಿಕರ ಹೊಟ್ಟೆ ಹೊಡೆದು ಪ್ರತಿ ತಿಂಗಳು 70-80 ಲಕ್ಷ ಲೂಟಿ ಹೊಡೆಯುವ ಗುತ್ತಿಗೆದಾರರು ತಮ್ಮ ಲಾಭಕ್ಕೆ ಕೊಕ್ಕೆ ಬೀಳುತ್ತದೆಂದು ಅನೇಕ ಕುತಂತ್ರಗಳನ್ನು ಮಾಡಲು ಶುರು ಮಾಡಿದರು. ಮೋಸದ ವೇಳಾ ಪಟ್ಟಿಯೊಂದನ್ನು ಮಾಡಿ ಖಾಲಿ ವೇಳಾಪಟ್ಟಿಯಲ್ಲಿ ಅನಕ್ಷರಸ್ಥ ಕಾರ್ಮಿಕರ ಹೆಬ್ಬೆಟ್ಟಿನ ಗುರುತು ಹಾಕಿಸಿಕೊಂಡು 7 ಗಂಟೆಯ ದುಡಿತವನ್ನು ಕೇವಲ 4-5 ಗಂಟೆ ಎಂದು ತೋರಿಸಿ ಹಳೆ ಸಂಬಳ 900/-, 1000/- ರೂವನ್ನೆ ನೀಡುತ್ತೇವೆಂದರು. ಗುತ್ತಿಗೆದಾರರ ಈ ಕುತಂತ್ರಕ್ಕೆ ಪಾಲಿಕೆಯ ಆರೋಗ್ಯಾಧಿಕಾರಿಗಳೂ ಶಾಮೀಲಾಗಿದ್ದಾರೆ. ಗುತ್ತಿಗೆದಾರರು ದೋಚುವ ಲಾಭದಲ್ಲಿ ನಿಯಮಿತವಾಗಿ ಪಾಲು ಪಡೆಯುವ ಅಧಿಕಾರಿಗಳಿಂದ ಇನ್ನೇನನ್ನು ನಿರೀಕ್ಷಿಸಬಹುದು? ಧೈರ್ಯಗುಂದದ ಕಾರ್ಮಿಕರು ಗುತ್ತಿಗೆದಾರರಾದ ಸರಸ್ವತಿಯವರ ವಿರುದ್ಧ ಮಾಗಡಿ ರಸ್ತೆ ಪೋಲೀಸ್ ಠಾಣೆಯಲ್ಲಿ ದೂರು ನೀಡಿದರು ಮತ್ತು ದಿನಾಂಕ 11-5-02 ರಂದು ಪತ್ರಿಕಾ ಗೋಷ್ಠಿಯನ್ನು ಕರೆದು ಗುತ್ತಿಗೆದಾರರ ಕುತಂತ್ರವನ್ನು ಬಯಲಿಗೆಳೆದರು. ಜನವಾಹಿನಿ,, ಈ ಸಂಜೆ, ವಿಜಯ ಕರ್ನಾಟಕ, ಈ ನಾಡು, ಓರಿಯಂಟಲ್ ನ್ಯೂಸ್ ಸರ್ವೀಸ್, ಡೆಕ್ಕನ್ ಹೆರಾಲ್ಡ್, ಕರ್ನಾಟಕ ನ್ಯೂಸ್ ನೆಟ್, ಸಿಟಿ ಚಾನೆಲ್, ಉದಯ ಟಿವಿ ಹಾಗು ಇನ್ನಿತರರು ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿದ್ದರು. ಪತ್ರಿಕಾ ಗೋಷ್ಠಿಯಲ್ಲಿ ಯೋಜನಾ ಆಯೋಗದ ಮಾಜಿ ಅಧ್ಯಕ್ಷರಾದ ಶ್ರೀ ಎಲ್.ಸಿ. ಜೈನ್ ಹಾಗು ಗಾಂಧಿ ಶಾಂತಿ ಪ್ರತಿಷ್ಠಾನದ ಶ್ರೀ ಸತ್ಯವ್ರತರವರು ಮಾತನಾಡಿದರು.

ಕೆಲವು ವಾರ್ಡ್‌ಗಳಲ್ಲಿ ವಿಶೇಷವಾಗಿ ರಾಜಾಜಿನಗರದ ವಾರ್ಡಿನ ಕಾರ್ಮಿಕರು ಎಡಬಿಡದೆ ಹೋರಾಟ ನಡೆಸಿ ಕೆಲಸ ಮುಗಿಸಿದ ನಂತರ ಆರೋಗ್ಯಾಧಿಕಾರಿಗಳ ಕಛೇರಿಯನ್ನು ಮುತ್ತಿಗೆ ಹಾಕಿದ್ದರ ಪರಿಣಾಮವಾಗಿ ರೂ 1550/- ನ್ನು ಜಾರಿಗೊಳಿಸಲೇ ಬೇಕಾಯಿತು. ರೆಸಲ್ ಮಾರ್ಕೆಟ್ಟನಲ್ಲಿ ಕೆಲಸ ನಿಲ್ಲಿಸಿದರು ಬೀಳುವ ಕಸದ ಹೊರೆಯಿಂದಾಗುವ ಅನಾಹುತವನ್ನು ನೆನೆದೋ ಏನೋ ಹೆಚ್ಚು ತೊಂದರೆ ಮಾಡದೆ 1500/-ರೂವನ್ನು ನೀಡಲಾಗಿದೆ. ಎಲ್ಲಾ ವಾರ್ಡ್‌ಗಳಲ್ಲಿ ಇನ್ನೂ ಜಾರಿಗೊಂಡಿಲ್ಲ.

ಕಾರ್ಮಿಕರ ಹೋರಾಟದ ತೀವ್ರತೆಗೆ ತತ್ತರಿಸುವಂತಾದ ಗುತ್ತಿಗೆದಾರರು ಸಂಘವನ್ನು ಮುರಿಯುವ ಕುತಂತ್ರಕ್ಕೂ ಕೈಹಾಕಿದ್ದಾರೆ. ರಾಜಾಜಿನಗರದ 21 ಎ ವಾರ್ಡ್‌ನಲ್ಲಿ ಸಂಘದ ಅಧ್ಯಕ್ಷರು ಕೆಲಸ ಮಾಡುತ್ತಿದ್ದು, ಅಲ್ಲಿ ಕಾರ್ಮಿಕರು ಹೋರಾಟಕ್ಕೆ ಬದ್ಧರಾಗಿದ್ದಾರೆ. ಅವರ ಧೈರ್ಯವನ್ನು ಮುರಿಯುವ ಸಲುವಾಗಿ ಆ ವರ್ಷದ ಕಸ ವಿಲೇವಾರಿ ಗುತ್ತಿಗೆದಾರರಾದ ಸರಸ್ವತಿಯವರು, ಹೊರಗಿನಿಂದ ಕೆಲಸಗಾರರನ್ನು ಕರೆತಂದು, ಹಳೆಯ ಕೆಲಸಗಾರರನ್ನು ಎತ್ತಂಗಡಿಮಾಡಲು ಹೊರಟಿದ್ದರು. ಅವರನ್ನು ಕಾರ್ಮಿಕರು, ಯಶಸ್ವಿಯಾಗಿ ಶಾಂತಿಯಿಂದಲೇ ತಡೆದರು. ಮೊದಲಿಗೆ ಅಲ್ಲಿನ ಪೊಲೀಸ್ ಠಾಣೆಯವರು ಕಾರ್ಮಿಕರಿಗೆ ವಿರೋಧ ತೋರಿದರು. ಕೂಡಲೇ ಸಂಘದವರು ಹಿರಿಯ ಪೋಲೀಸ್ ಅಧಿಕಾರಿಗಳಿಗೆ 'ಇದು ಕಾರ್ಮಿಕರ ವಿಷಯವಾಗಿದ್ದು ಕಾರ್ಮಿಕ ಆಯುಕ್ತರ ಸಂಧಾನದ ಪ್ರಕ್ರಿಯೆ ಜಾರಿಯಲ್ಲಿ ರುವುದರಿಂದ ಪೋಲೀಸರು ಕಾರ್ಮಿಕರೊಂದಿಗೆ ಸಹಕರಿಸಬೇಕೆಂದು' ಮನವಿ ಮಾಡಿಕೊಂಡಿದ್ದರಿಂದ ಪೊಲೀಸರು ಮಧ್ಯೆ ಪ್ರವೇಶಿಸದೆ ಸುಮ್ಮನಾದರು. ಶಾಂತಿ ಭಂಗವಾಗದಂತೆ ಹೋರಾಟ ಮಾಡಿದ್ದರಿಂದ ಪೊಲೀಸರೂ ಕಾರ್ಮಿಕರಿಗೆ ಸಹಕರಿಸಿದರು.

ಲಕ್ಷಾಂತರ ರೂಪಾಯಿಗಳ ಲಾಭಕ್ಕೆ ಧಕ್ಕೆಯಾಗುವುದರಿಂದ ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗಳಿಗೆ ಹೋರಾಡುತ್ತಿರುವ ಸಂಘವನ್ನು ಮುರಿಯಲು ಗುತ್ತಿಗೆದಾರರು ನಡೆಸುತ್ತಿರುವ ಕುತಂತ್ರಕ್ಕೆ ಪಾಲಿಕೆಯ ಚುನಾಯಿತ ಪ್ರತಿನಿಧಿಗಳೂ ಕೈ ಜೋಡಿಸಿದ್ದಾರೆ. ರಾಜಾಜಿನಗರದ ಕಾರ್ಪೋರೇಟರ್ ಅದ ಶ್ರೀನಿವಾಸ್ ಅವರು ಅಲ್ಲಿನ ಕಾರ್ಮಿಕರ ಸಭೆ ಕರೆದು 'ಕಾರ್ಮಿಕರು ಸಂಘವನ್ನು ಬಿಡಬೇಕು ಇಲ್ಲದಿದ್ದರೆ ಕೆಲಸದಿಂದ ತೆಗೆಯುವುದಾಗಿ' ಬಹಿರಂಗವಾಗಿ ಹೇಳಿದ್ದಾರೆ. ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮತ್ತವರ ಕುಟುಂಬದವರ ಮೇಲೆ ಹಲ್ಲೆ ಮಾಡಿಸಿ, ಕೊಲೆ ಮಾಡುವ ಬೆದರಿಕೆಯೊಡ್ಡಿದ್ದಾರೆ. ಕೆಲಸ ಸರಿಯಾಗಿ ಮಾಡುವುದಿಲ್ಲವೆಂದು ನಾಗರೀಕರು ದೂರು ನೀಡುತ್ತಿದ್ದಾರೆಂಬ ನೆಪವೊಡ್ಡಿ ಹೊರಗಿನಿಂದ ಕೆಲಸಗಾರರನ್ನು ಕರೆತಂದಿದ್ದಾರೆ. ಹೆಚ್ಚಿನ ಕೆಲಸಗಾರರನ್ನು ನೇಮಿಸಿಕೊಳ್ಳುವುದು ಕಾನೂನು ಬಾಹಿರವಲ್ಲವೆಂದು ಪೊಲೀಸರು ಹೇಳುತ್ತಿದ್ದಾರೆ. ಗುತ್ತಿಗೆದಾರರು ಹಳೆಯ ಕೆಲಸಗಾರರು (10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ) ಕೆಲಸ ಮಾಡುತ್ತಿದ್ದರೂ ಸಹ ಹಾಜರಿ ತೆಗೆದುಕೊಳ್ಳುತ್ತಿಲ್ಲ. ಕಾರ್ಮಿಕರ ವಿಷಯ ಕಾರ್ಮಿಕ ಆಯುಕ್ತರ ಸಂಧಾನ ಪ್ರಕ್ರಿಯೆಯಲ್ಲಿರುವುದರಿಂದ ಕಾರ್ಮಿಕರನ್ನು ಕೆಲಸದಿಂದ ತೆಗೆಯುವುದು ಕಾನೂನು ಬಾಹಿರವಾಗಿದೆ.

ಯಾವುದರಿಂದಲೂ ವಿಚಲಿತರಾಗದೆ ಕಾರ್ಮಿಕರು ಹೋರಾಟ ಮುಂದುವರಿಸಿದ್ದಾರೆ. ತಮ್ಮ ಹಾಜರಾತಿಯನ್ನು ತಾವೇ ಹಾಕಿಕೊಂಡು, ಮಾಡಿದ ಕೆಲಸಕ್ಕೆ ಅಲ್ಲಿನ ನಿವಾಸಿಗಳಿಂದಲೇ ಸಹಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಬಡ, ದಲಿತ, ಅನಕ್ಷರಸ್ಥ ಕಾರ್ಮಿಕರು ಕೊಡುವ ಅತ್ಯಲ್ಪ ಸಂಬಳಕ್ಕೆ ನಿಷ್ಠೆಯಿಂದ ದುಡಿಯುತ್ತಿದ್ದಾರೆ. ಅರೆಹೊಟ್ಟೆ ಕಾರ್ಮಿಕರ ದುಡಿಮೆಯ ಬೆವರಿನಲ್ಲಿ ಲಕ್ಷಾಂತರ ದೋಚುವ ಗುತ್ತಿಗೆದಾರರೊಂದಿಗೆ ಭ್ರಷ್ಟ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಶಾಮೀಲಾಗಿದ್ದಾರೆ. ಭ್ರಷ್ಟ ಅಧಿಕಾರಶಾಹಿ, ಲಾಭಕೋರರು, ಭ್ರಷ್ಟ ಚುನಾಯಿತ ಪ್ರತಿನಿಧಿಗಳ ದುಷ್ಟಕೂಟದ ವಿರುದ್ಧ ಬಡ ಕಾರ್ಮಿಕರು ಹೋರಾಡಬೇಕಿದೆ. ಅವರ

ಹೋರಾಟವನ್ನು ಬೆಂಬಲಿಸುವುದು ನಮ್ಮೆಲ್ಲರ ನೈತಿಕ ಜವಾಬ್ದಾರಿಯೆಂದು ಮಾನಸ ಭಾವಿಸುತ್ತದೆ.

ಬೆಂಬಲ ಗುಂಪಿನವರು ಹಲವಾರು ವಿಧಾನಸಭೆ, ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಮನವಿ ಪತ್ರ ನೀಡಿ ಸಭೆಯಲ್ಲಿ ಚರ್ಚಿಸಲು ಕೋರಿದ್ದಾರೆ. ಹಲವು ಬೆಂಬಲಿಗರು ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ, ನ್ಯಾಯದೊರಕಿಸಿಕೊಡಬೇಕೆಂದು ಕೋರಿ ಮುಖ್ಯಮಂತ್ರಿಗಳಿಗೆ ಇ-ಮೇಲ್ ಕಳಿಸಿದ್ದಾರೆ.

-ದು. ಸರಸ್ವತಿ

ಬೆಂಗಳೂರು ಮಹಾನಗರ ಪಾಲಿಕೆ

ಸಂ:ಡಿ.ಹೆಚ್.(ಡಿ)ಸ್ವ.ಶು:311:01-02.

ಆಯುಕ್ತರವರ ಕಛೇರಿ,
ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ:22ನೇ ಮಾರ್ಚ್ 02.

ಕಛೇರಿ ಆದೇಶ


ವಿಷಯ:- ಗುತ್ತಿಗೆ ಪೌರಕಾರ್ಮಿಕರಿಗೆ ಕನಿಷ್ಠ ವೇತನ ಪಾವತಿ ಮಾಡುವ ಬಗ್ಗೆ.


ಉಲ್ಲೇಖ:- ಈ ಕಛೇರಿ ಆದೇಶ ಸಂಖ್ಯೆ.ಡಿ.ಹೆಚ್(ಡಿ)ಸ್ವ.ಶು:311:01-02;
2. ಈ ಕಛೇರಿ ಆದೇಶ ಸಮ ಸಂಖ್ಯೆ.ದಿನಾಂಕ:14-12-01.
3. ಈ ಕಛೇರಿ ಆದೇಶ ಸಮ ಸಂ:ದಿನಾಂಕ:11-02-02.

ಗುತ್ತಿಗೆ ಪೌರಕಾರ್ಮಿಕರಿಗೆ ಕನಿಷ್ಠ ವೇತನ ನೀಡುವ ಬಗ್ಗೆ ಮಾರ್ಗಸೂಚಿಗಳನ್ನು ಮೇಲ್ಕಂಡ ಉಲ್ಲೇಖನಗಳ ಪ್ರಕಾರ ದಿನಾಂಕ:13-8-01,14-12-01 ರಂದು ಸ್ಪಷ್ಟವಾಗಿ ನೀಡಲಾಗಿತ್ತು. ದಿನಾಂಕ:11-2-02ರಂದು ಕಛೇರಿ ಆದೇಶ ಹೊರಡಿಸಿ ಜನವರಿ 2002ರಿಂದ ಒಪ್ಪಂದದ ಕರಾರಿನಂತೆ ರೂ.1550-00ಗಳನ್ನು ಜನವರಿ ಮಾಹೆಯಿಂದ ನೀಡುವಂತೆ ಆದೇಶ ನೀಡಲಾಗಿತ್ತು. ಈ ಎಲ್ಲಾ ಆದೇಶಗಳ ಬಗ್ಗೆ ವಲಯ ಆರೋಗ್ಯಾಧಿಕಾರಿಗಳು ಅನುಸರಣಾ ವರದಿ ನೀಡದೆ ಉದಾಸೀನದಿಂದ ವರ್ತಿಸುತ್ತಿರುವುದು ಕಂಡುಬಂದಿದೆ. ಆದುದರಿಂದ ಎಲ್ಲಾ ವಲಯ ಆರೋಗ್ಯಾಧಿಕಾರಿಗಳಿಗೆ, ಸಹ ಆರೋಗ್ಯಾಧಿಕಾರಿಗಳಿಗೆ, ಹಾಗೂ ಎಲ್ಲಾ ವಲಯ ಆರೋಗ್ಯ ವೈದ್ಯಾಧಿಕಾರಿಗಳಿಗೆ ಮೇಲ್ಕಂಡ ಆದೇಶವನ್ನು ಚಾಚೂತಪ್ಪದೆ ಪಾಲಿಸುವಂತೆ ಆದೇಶಿಸಲಾಗಿದೆ.

ಎಲ್ಲಾ ವಲಯ ಆರೋಗ್ಯಾಧಿಕಾರಿಗಳು ಜನವರಿ ತಿಂಗಳಿಂದ ಕಾರ್ಮಿಕರಿಗೆ ರೂ. 1550-00ಗಳ ವೇತನ ನೀಡುತ್ತಿರುವ ಬಗ್ಗೆ ಗುತ್ತಿಗೆದಾರರು ವಿವರಗಳ ಪಟ್ಟಿಯನ್ನು ತುರ್ತಾಗಿ ಮುಖ್ಯ ಆರೋಗ್ಯಾಧಿಕಾರಿಗಳವರಿಗೆ ಸಲ್ಲಿಸಲು ಆದೇಶಿಸಿದೆ. ಒಂದು ವೇಳೆ ಗುತ್ತಿಗೆದಾರರು ಕಡಿಮೆ ವೇತನ ನೀಡಿದಲ್ಲಿ ಈ ವ್ಯತ್ಯಾಸದ ಮೊತ್ತವನ್ನು ಗುತ್ತಿಗೆದಾರರ ಬಿಲ್ಲಿನಿಂದ ಕಟಾವು ಮಾಡಿ ಕಾರ್ಮಿಕರಿಗೆ ಪಾವತಿಸುವಂತೆ ಆದೇಶಿಸಿದೆ. ಈ ಬಗ್ಗೆ ಪ್ರಮಾಣೀಕರಿಸಿದ ಹಾಜರಾತಿ ವಿವರಗಳನ್ನು ಹಾಗೂ ಬಟವಾಡೆ ವಿವರಗಳನ್ನು ಪಟ್ಟಿ ಮಾಡಿ ತುರ್ತಾಗಿ ಮುಖ್ಯ ಆರೋಗ್ಯಾಧಿಕಾರಿಗಳವರಿಗೆ ಸಲ್ಲಿಸಲು ಸೂಚಿಸಿದೆ. ಮೇಲ್ಕಂಡ ವಿಷಯಗಳನ್ನು ಅತ್ಯಂತ ಜರೂರಾಗಿ ಸಲ್ಲಿಸಲು ಆದೇಶಿಸಿದೆ. ಈ ಬಗ್ಗೆ ನಿರ್ಲಕ್ಷ್ಯ ಹಾಗೂ ಉದಾಸೀನ ತೋರಿಸುವ ವಲಯ ಆರೋಗ್ಯಾಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಆಯುಕ್ತರು,
ಬೆಂಗಳೂರು ಮಹಾನಗರ ಪಾಲಿಕೆ.





ರಾಷ್ಟ್ರೀಯ ಮಹಿಳಾ ಆಯೋಗಕ್ಕೊಂದು ಪತ್ರ

ಗುಜರಾತ್‌ನಲ್ಲಿ ನಡೆದ ಕೋಮು ಗಲಭೆಯಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳನ್ನು ದೈಹಿಕವಾಗಿ ಹಿಂಸಿಸಿ ಅತ್ಯಾಚಾರ ಎಸಗಲಾಗಿದೆ. ಈ ಸಂದರ್ಭದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವು ಗುಜರಾತ್‌ನ ಗಲಭೆ ಪ್ರದೇಶಕ್ಕೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯ ಬಗ್ಗೆ ಒಂದು ವರದಿ ಪ್ರಕಟಪಡಿಸಿದೆ. ಅನೇಕ ಮಹಿಳಾ ಸಂಘಟನೆಗಳು ಕೂಡ ಗಲಭೆ ಪ್ರದೇಶಕ್ಕೆ ಭೇಟಿ ನೀಡಿ ಮುಖ್ಯವಾಗಿ ಮಹಿಳೆಯರು ಅನುಭವಿಸಿದ ಲೈಂಗಿಕ ಅತ್ಯಾಚಾರದ ಬಗ್ಗೆ ಸತ್ಯ ಶೋಧನ ವರದಿಗಳನ್ನು ಪ್ರಕಟಪಡಿಸಿವೆ. ಅದರ ಮುಖ್ಯಾಂಶವನ್ನು ಈಗಾಗಲೇ ಮಾನಸ ಓದುಗರಿಗಾಗಿ ಪ್ರಕಟಿಸಿದ್ದೇವೆ. ರಾಷ್ಟ್ರೀಯ ಮಹಿಳಾ ಆಯೋಗದ ವರದಿಯನ್ನು ಓದಿದಾಗ, ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ನಿಜಕ್ಕೂ ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಅಥವಾ ಅವರ ಹಿತ ಕಾಯುವಲ್ಲಿ ಕಿಂಚಿತ್ತಾದರೂ ಕಾಳಜಿ ಇದೆಯಾ? ಎಂಬ ಸಂಶಯ ಮೂಡುತ್ತದೆ. 'ಸಹೇಲಿ' ಎಂಬ ದೆಹಲಿಯ ಮಹಿಳಾ ಸಂಘಟನೆಯು ಗುಜರಾತ್‌ಗೆ ಭೇಟಿ ನೀಡಿ ಸತ್ಯ ಶೋಧನೆಯ ವರದಿ ಮಾಡಿದ ಮಹಿಳಾ ಸಂಘಟನೆಗಳ ಸಮಿತಿಯಲ್ಲಿ ಒಂದಾಗಿದೆ. ರಾಷ್ಟ್ರೀಯ ಮಹಿಳಾ ಆಯೋಗದ ವರದಿಯನ್ನು ಓದಿ, ಸಹೇಲಿಯು ತಮ್ಮ ಅನಿಸಿಕೆಗಳನ್ನು ದಾಖಲಿಸಿ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರಿಗೆ ಪತ್ರವೊಂದು ಬರೆದಿದೆ. ಆ ಪತ್ರದ ಸಾರಾಂಶವನ್ನು ಮಾನಸ ಓದುಗರಿಗಾಗಿ ಪ್ರಕಟಿಸಲಾಗಿದೆ.

ಗೆ,

ಡಾ॥ ಪೂರ್ಣಿಮಾ ಅಡವಾಣಿ
ರಾಷ್ಟ್ರೀಯ ಮಹಿಳಾ ಆಯೋಗ
4, ದೀನ್ ದಯಾಳ್ ಉಪಾಧ್ಯಾಯ ಮಾರ್ಗ
ನವದೆಹಲಿ - 110 002

ಆತ್ಮೀಯ ಡಾ. ಅಡವಾಣಿಯವರೆ,

ಈ ಪತ್ರವು ಗುಜರಾತ್ ಗಲಭೆ ಪ್ರದೇಶದಲ್ಲಿ ಮಹಿಳೆ ಮತ್ತು ಹೆಣ್ಣು ಮಕ್ಕಳ ಸ್ಥಿತಿ ಗತಿಯ ಕುರಿತು ತಾವು ಪ್ರಕಟಿಸಿದ ವರದಿಗೆ ಸಂಬಂಧಿಸಿದೆ. ನಮ್ಮ ಅನಿಸಿಕೆಗಳನ್ನು ದಾಖಲಿಸಲು ಇಚ್ಛಿಸುತ್ತೇವೆ.

ಗುಜರಾತ್ ಕೋಮುದಳ್ಳುರಿಯಲ್ಲಿ ಹತ್ತಿಕೊಂಡು ಉರಿಯುತ್ತಿದ್ದಂತೆ ಅಲ್ಪ ಸಂಖ್ಯಾತ ಮಹಿಳೆಯರ ಸ್ಥಿತಿಗತಿ ಅರಿಯಲು ತಕ್ಷಣವೇ ಸಮಿತಿ ರಚಿಸಿ ಗುಜರಾತ್‌ಗೆ ತಾವು ಭೇಟಿ ನೀಡಬೇಕಾಗಿತ್ತು. ಗಲಭೆ, ಕೊಲೆ, ಸುಲಿಗೆ, ಅತ್ಯಾಚಾರಗಳು ನಡೆದು 5 ವಾರಗಳ ನಂತರ ತಾವು ಸಮಿತಿ ರಚಿಸಿದ್ದೀರಿ. ಇದರಿಂದ ಮೊಟ್ಟ ಮೊದಲನೆಯ ಆಕ್ಷೇಪಣೆ ಎಂದರೆ ತಾವು ಬೇಜವಾಬ್ದಾರಿಯಿಂದ ವರ್ತಿಸಿದ್ದೀರಿ.

ಅಲ್ಪ ಸಂಖ್ಯಾತ ಕೋಮಿಗೆ ಸೇರಿದ ಅಸಹಾಯಕ ಜನರ ಮೇಲೆ ನಡೆಸಿದ ಪ್ರಹಾರಕ್ಕೆ ಕೇವಲ 'ಗಲಭೆ' ಅಥವಾ 'ಕೋಮು ಗಲಭೆ' ಎಂಬ ಸಾಮಾನ್ಯ ಪದಗಳಿಂದ ವರದಿ ಮಾಡಿದ್ದೀರಿ. ಇದು ಸಮಂಜಸವಲ್ಲ. ನಾವು ಮಾರ್ಚ್ ತಿಂಗಳಿನಲ್ಲಿ ಗುಜರಾತಿಗೆ ಭೇಟಿ ನೀಡಿದ್ದೆವು. ನಮ್ಮೊಂದಿಗೆ ಮುಂಬೈನ 'ಫೋರಮ್ ಎಗೈನೆಸ್ಟ್ ವಿಮೆನ್' 'ಆವಾಜ್ ಇ ನಿಸಾನ್' ಮತ್ತು ಬರೋಡದ 'ಸಹಿಯಾರ್' ಎಂಬ ಮಹಿಳಾ ಸಂಘಟನೆಯ ಧಿಗಳಿದ್ದರು. 'ಪಿಯುಸಿಎಲ್' (ಬರೋದ) ಪ್ರಟಪಡಿಸಿದ ವರದಿಯಲ್ಲಿ ನಾವು ನಡೆಸಿದ ಸತ್ಯ ಶೋಧನಾ ವರದಿ ಇದೆ. ಈ ವರದಿಯ ಪ್ರಕಾರ ಗುಜರಾತ್‌ನಲ್ಲಿ ನಡೆದ ನರಮೇಧವು ಪೂರ್ವ ಯೋಜಿತವಾಗಿತ್ತು, ಸುಸಜ್ಜವಾಗಿ ವ್ಯವಸ್ಥಿತವಾಗಿತ್ತು ಮತ್ತು ಇದಕ್ಕೆ ರಾಜ್ಯ ಸರ್ಕಾರದ ಸಂಪೂರ್ಣ ಬೆಂಬಲ ದೊರೆತಿತ್ತು ಎಂಬುದರ ಬಗ್ಗೆ ಪುರಾವೆಗಳಿವೆ.

ರಾಷ್ಟ್ರೀಯ ಮಹಿಳಾ ಆಯೋಗದ ವರದಿಯಲ್ಲಿ ಹಿಂಸೋತ್ಪಾದಕರ ಬಗ್ಗೆ ಚಕಾರವೇ ಇಲ್ಲ. ಆರ್.ಎಸ್.ಎಸ್., ವಿಹೆಚ್‌ಪಿ ಮತ್ತು ಬಜರಂಗ ದಳದವರು ಈ ನರಮೇಧದಲ್ಲಿ ಮುಖ್ಯ ಪಾತ್ರಧಾರಿಗಳು ಎಂಬ ಸತ್ಯ ಈಗಾಗಲೇ ಗುಜರಾತ್‌ಗೆ ಭೇಟಿ ನೀಡಿ ಸತ್ಯಶೋಧನಾ ವರದಿ ಮಾಡಿದ ಅನೇಕ ತಂಡಗಳಿಗೆ, ಮಾಧ್ಯಮದವರಿಗೆ, ನಮಗೆ ಕೂಡ ಗೋಚರಿಸಿದೆ. ಅಮಾನವೀಯ ಹಿಂಸೆಗೆ ಒಳಗಾದ ಅಸಂಖ್ಯಾತ ಮುಸ್ಲಿಂ ಜನರ ಮನಸ್ಸಿನಲ್ಲಿ ಸ್ವಲ್ಪವಾದರೂ ಭದ್ರತೆ ಮೂಡಿಸಬೇಕಾದರೆ ತಪ್ಪಿತಸ್ಥರನ್ನು ಹೆಸರಿಸಿ ಬಯಲಿಗೆ ತರಬೇಕಾಗುತ್ತದೆ. ಹಿಂಸೋತ್ಪಾದಕರು ಯಾವುದೇ ಭಯ ಭೀತಿ ಇಲ್ಲದೆ ಸರ್ಕಾರದ ರಕ್ಷಣೆಯಡಿಯಲ್ಲಿ ಇನ್ನೂ ಓಡಾಡಿಕೊಂಡಿರುವಾಗ ಮತ್ತು ಹಿಂಸೆಗೆ ಒಳಗಾದ ಜನರು ಭಯ ಭೀತಿಯಿಂದ ಆಶ್ರಿತ ತಾಣಗಳಲ್ಲಿ ಮುದುಡಿ ಕುಳಿತುಕೊಂಡಿರುವಾಗ "ಉದ್ರೇಕವನ್ನು ಉದ್ದೀಪನಗೊಳಿಸುವುದು ಸರಿಯಲ್ಲ" ಎಂದು ವರದಿ ಮಾಡಿರುವುದು ಈ ಸಂದರ್ಭದಲ್ಲಿ ಅಸಮರ್ಥವಾಗುತ್ತದೆ. ತಪ್ಪಿತಸ್ಥರನ್ನು ಹಿಡಿದು ಶಿಕ್ಷಿಸಿದಲ್ಲಿ ನೊಂದವರಿಗೆ ನ್ಯಾಯ ಸಿಕ್ಕಂತಾಗುತ್ತದೆ.

ನರಮೇಧಕ್ಕೆ ಕಾರಣವಾದ ಸರ್ಕಾರದ ಬೇಜಾವಾಬ್ದಾರಿಯನ್ನು ತಮ್ಮ ಸಮಿತಿಯು ಸಂಪೂರ್ಣವಾಗಿ ಕ್ಷಮಿಸಿದೆ. ಹತ್ಯಾಕಾಂಡವನ್ನು ಮುಂದುವರಿಸಿಕೊಂಡು ಬಂದಂತಹ

ತಪ್ಪನ್ನ ರಾಜ್ಯ ಸರ್ಕಾರ ಮಾಡಿದ್ದೇ ಅಲ್ಲದೇ ಸರ್ಕಾರದ ಇತರ ಅಂಗ ಸಂಸ್ಥೆಗಳು ಮುಸ್ಲಿಂರ ಕೊಲೆ, ಸುಲಿಗೆ, ದಂಗೆ, ಲೂಟಿ, ಮತ್ತು ಅತ್ಯಾಚಾರದಂತಹ ಅಪರಾಧ ಎಸಗುವುದರಲ್ಲಿ ಕ್ರಿಯಾಶೀಲಾವಗಿ ಪಾಲ್ಗೊಂಡಿತ್ತು ಎಂಬುದಕ್ಕೆ ನಮಗೆ ಅನೇಕ ಪುರಾವೆಗಳು ದೊರೆತಿವೆ. ಮೊದಲಿಗೆ ಬಿ.ಜೆ.ಪಿ. ಸರ್ಕಾರದ ಸದಸ್ಯರ ಹೆಸರುಗಳನ್ನು ಎಫ್.ಐ.ಆರ್‌ನಲ್ಲಿ ಇವೆ, ಹಿಂಸೆಯನ್ನು ಹತ್ತಿಕ್ಕಿ ಸಂದರ್ಭವನ್ನು ಹತೋಟಿಗೆ ತರಲು ಪ್ರಯತ್ನಿಸಿದ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿರುವುದನ್ನು ಗಮನಿಸಿದರೆ ನಾಗರಿಕ ಆಡಳಿತದ ಸಂಪೂರ್ಣ ಹಿಡಿತ ಅಲ್ಪ ಸಂಖ್ಯಾತ ವಿರೋಧಿ ಸರ್ಕಾರಕ್ಕೆ ಇರುವುದು ಕಂಡುಬರುತ್ತದೆ.

ಈ ನರಮೇಧದಲ್ಲಿ ಭಾಗಿಯಾದ ರಾಜಕೀಯ ವ್ಯಕ್ತಿಗಳನ್ನು ಮತ್ತು ಕರ್ತವ್ಯಲೋಪ ಸರ್ಕಾರಿ ಅಧಿಕಾರಿಗಳನ್ನು ದಂಡಿಸಿ ಶಿಕ್ಷೆ ವಿಧಿಸಬೇಕು. ಇಲ್ಲದಿದ್ದಲ್ಲಿ ''ಮಹಿಳೆಯರ ಮೇಲೆ ನಡೆದ ಘೋರ ಅಪರಾಧದ ವಿರುದ್ಧ ಕಾನೂನುಗಳನ್ನು ಜಾರಿಗೊಳಿಸುವಂತಹ ಎಲ್ಲ ಸಿಬ್ಬಂದಿ ವರ್ಗದವರು ಚುರುಕಾಗಿ ಕಾರ್ಯಗತರಾಗಬೇಕು'' ಎಂಬ ತಮ್ಮ ಹೇಳಿಕೆಗೆ ಅರ್ಥವೇ ಇರುವುದಿಲ್ಲ.

ಇನ್ನಿತರ ಮಹಿಳಾ ಸಮಿತಿಗಳು ಗುಜರಾತ್‌ಗೆ ಭೇಟಿ ನೀಡಿ ಪ್ರಕಟಪಡಿಸಿದ ವರದಿಯು ವಿಪರೀತ ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ನಫಿಸಾ ಹುಸೇನ್ ರವರು ಅಲ್ಲಗೆಳೆದಿರುವುದು ಮತ್ತು ಮೌನವಹಿಸಿರುವುದರಿಂದ, ಅತಿ ಘೋರ ಲೈಂಗಿಕ ಹಿಂಸೆಗೆ ಒಳಗಾದ ಅಲ್ಪ ಸಂಖ್ಯಾತ ಮಹಿಳೆಯರನ್ನು ತಲ್ಲಣಗೊಳಿಸಿದೆ. ಮಹಿಳೆಯರ ಹಿತಕ್ಕಾಗಿ ಮತ್ತು ಮಹಿಳಾ ಹಕ್ಕುಗಳ ಸಂರಕ್ಷಣೆಗಾಗಿ ಸ್ಥಾಪಿಸಿದ ಸರ್ಕಾರದ ಉನ್ನತ ಸಂಸ್ಥೆಯಾದ ರಾಷ್ಟ್ರೀಯ ಮಹಿಳಾ ಆಯೋಗದ ವರದಿಯು ಸತ್ಯಾಂಶವನ್ನು ಅಲ್ಲಗೆಳೆದಿರುವುದೇ ಅಲ್ಲದೆ ಅಪಾಯಕಾರಿ ಕೂಡ.

ಎರಡು ತಿಂಗಳಿನಿಂದ ಹೇಳಲಾಗದ ಸಂಕಟಕ್ಕೆ ಗುರಿಯಾದ ಮಹಿಳೆಯರ ನೋವಿಗೆ ಸ್ಪಂದಿಸದಿರುವ ತಾವು, ಅಲ್ಪಸಂಖ್ಯಾತ ಮುಸ್ಲಿಂ ಮಹಿಳೆಯರು ಹಿಂಸೆಗೆ ಗುರಿಯಾಗಿ ಅತ್ಯಾಚಾರಕ್ಕೆ ಒಳಗಾಗಿದ್ದಾರೆ ಎಂಬ ಸತ್ಯಾಂಶವನ್ನು ಒಪ್ಪದಿರುವ ತಾವು ಮತ್ತು ಈ ಹತ್ಯಾಕಾಂಡದಲ್ಲಿ ಸರ್ಕಾರದ ಪಾತ್ರವನ್ನು ಗುರುತಿಸಿ ಖಂಡಿಸದೇ ಇರುವ ತಮಗೆ ಮತ್ತು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳಿಗೆ ಯಾವುದೇ ವ್ಯತ್ಯಾಸ ಇರುವುದಿಲ್ಲ.

ಆಶ್ರಿತ ತಾಣಗಳನ್ನು ಮುಚ್ಚಿ ಅಲ್ಲಿರುವ ಸಾವಿರಾರು ಜನರಿಗೆ ಪರ್ಯಾಯ ವಸತಿ ವ್ಯವಸ್ಥೆಯನ್ನು ನೀಡದಿರುವ ಸಂದರ್ಭದಲ್ಲಿ ಮತ್ತು ಎಫ್.ಐ.ಆರ್‌ನಲ್ಲಿ ಸೇರಿಸಿರುವ ಹೆಸರುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಬಲವಂತ ಪಡಿಸುತ್ತಿರುವ ಪರಿಸ್ಥಿತಿಯಲ್ಲಿ ತಾವು ತಮ್ಮ ವರದಿಯಲ್ಲಿ ಸೂಚಿಸಿರುವಂತೆ ಕಾನೂನು ಸುವ್ಯವಸ್ಥೆ ಕಾಯಲು ಮತ್ತು ನಿರಾಶ್ರಿತರಿಗೆ ಮರು ವಸತಿಯನ್ನು ಏರ್ಪಾಟು ಮಾಡುವಂತೆ ಸರ್ಕಾರ ಕಾರ್ಯ ನಿಮಿತ್ತವಾಗಲು ಯಾವ ಸೂಕ್ತ ಕ್ರಮತೆಗೆದುಕೊಂಡಿದ್ದೀರಿ.

2000ದ ಇಸವಿಯಲ್ಲಿ ತಾವು ಪ್ರಕಟಪಡಿಸಿದ Rape-A Legal study ಎಂಬ ದಾಖಲೆಯ ನೆನಪು ಮರುಕಳಿಸುತ್ತಿದೆ. ಅದರಲ್ಲಿ ತಾವು ಮಹಿಳೆಯರು ದಾಸ್ಯತ್ವಕ್ಕೆ ಒಳಗಾಗಿದ್ದು ಪರದೇಶಿಯರು ಭಾರತಕ್ಕೆ ಆಗಮಿಸಿದಾಗಿನಿಂದ ಎಂಬ ಅಸಾಮಾನ್ಯ ಭಾವನೆಯನ್ನು ಹುಟ್ಟು ಹಾಕಿದ್ದಿರಿ. ಅಗಾಧ ಚರಿತ್ರೆಯ ಮತ್ತು ಮಹಿಳಾವಾದಿ ಸಾಹಿತ್ಯದ ಸಂಪೂರ್ಣ ಅರಿವು ಇಲ್ಲದಿರುವುದನ್ನು ತಮ್ಮ ಅಧ್ಯಯನವು ಪ್ರತಿಬಿಂಬಿಸಿತು. ಆ ಅಧ್ಯಯನವು ಕೋಮುವಾದಿ ಚೌಕಟ್ಟಿನಲ್ಲಿ ನಿರ್ವಹಿಸಲಾಗಿತ್ತು. ಹಲವಾರು ಮಹಿಳಾ ಸಂಘಟನೆಗಳೊಂದಿಗೆ ನಾವು ಆ ವರದಿಯನ್ನು ವಿರೋದಿಸಿದ್ದರಿಂದ ಅದನ್ನು ಹಿಂತೆಗೆದುಕೊಳ್ಳಲಾಯಿತು. ಗುಜರಾತ್‌ನ ನರಮೇಧದ ಕುರಿತಾದ ವರದಿಯಲ್ಲಿ ಕೂಡ ಅದೇ ಕೋಮುವಾದದ ಮತ್ತು ಮುಸ್ಲಿಂ ವಿರೋಧಿ ಧೋರಣೆ ಪ್ರತಿಬಿಂಬಿತವಾಗಿದೆ.

ಈ ವರದಿಯಲ್ಲಿ ಪ್ರಕಟವಾದ ತಮ್ಮ ಅಭಿಪ್ರಾಯದಿಂದ ರಾಷ್ಟ್ರೀಯ ಆಯೋಗದ ಮೇಲಿನ ವಿಶ್ವಾಸ ಸಂಪೂರ್ಣವಾಗಿ ವಿಫಲವಾಗಿದೆ. ಉನ್ನತ ಮಟ್ಟದ ಸಂಸ್ಥೆಯಾದ ರಾಷ್ಟ್ರೀಯ ಮಹಿಳಾ ಆಯೋಗವು ಜನ್ಮ ತಳೆದಾಗಿನಿಂದಲೂ ಅದರ ಸ್ವಾಯತ್ತತೆಯ ಬಗ್ಗೆ ಮಹಿಳಾ ಸಂಘಟನೆಗಳಿಗೆ ಕಾಳಜಿಯ ವಿಷಯವಾಗಿತ್ತು.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ಅಲ್ಪ ಸಂಖ್ಯಾತರ ರಾಷ್ಟ್ರೀಯ ಆಯೋಗವು, ಮಾನವ ಹಕ್ಕುಗಳನ್ನು ಅದರಲ್ಲೂ ಮಹಿಳಾ ಹಕ್ಕುಗಳನ್ನು ಎತ್ತಿ ಹಿಡಿಯುವಲ್ಲಿ ಮತ್ತು ಇದರಲ್ಲಿ ಸರ್ಕಾರ ಪಾತ್ರವಿದೆ ಎಂಬ ವಿಷಯಕ್ಕೆ ಸ್ಪಷ್ಟ ನಿರ್ಧಾರ ತಳೆದಿದೆ ಎಂಬುದು ತಿಳಿದ ವಿಷಯ. ಆದರೆ ಈ ವಿಷಯಕ್ಕೆ ಸಂಬಂಧ ಪಟ್ಟಂತೆ ರಾಷ್ಟ್ರೀಯ ಮಹಿಳಾ ಆಯೋಗವು ಸ್ಪಷ್ಟ ನಿಲುವು ತಳೆಯಲು ಯಾವ ನಿರ್ಭಂದವಿದೆ.

ಆಡಳಿತ ಪಕ್ಷದ ವಕ್ತಾರರಾಗಿ ರಾಷ್ಟ್ರೀಯ ಮಹಿಳಾ ಆಯೋಗವು ಕಾರ್ಯನಿರ್ವಹಿಸದೆ ಎಲ್ಲ ಕೋಮಿನ ಮಹಿಳೆಯರ ಪ್ರತಿನಿಧಿಯಾಗಿ ಕಾರ್ಯಗತರಾಗಬೇಕು. ಆದರೆ ಪ್ರಸ್ತುತ ರಾಷ್ಟ್ರೀಯ ಮಹಿಳಾ ಆಯೋಗವು ಈ ಪಾತ್ರದಿಂದ ತಪ್ಪಿಸಿಕೊಂಡಿದೆ.

ವಿಶ್ವಾಸದಿಂದ
ಸಹಿ
ಸಹೇಲಿಯ ಪರವಾಗಿ.

ಪೊಲೀಸ್ ಇಲಾಖೆಯ ಅಪರಾಧ ತಡೆ ಮಾಸಾಚರಣೆ - ಒಂದು ವರದಿ

ಪೊಲೀಸ್ ಇಲಾಖೆಯ ಅಪರಾಧ ತಡೆ ಮಾಸಾಚರಣೆಯನ್ನು ಈ ವರ್ಷ ಕುಶಾಲನಗರ ಪೊಲೀಸ್ ವೃತ್ತದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು. ಶಾಲಾ ಕಾಲೇಜು ಮಕ್ಕಳಿಗಾಗಿ ಕಾನೂನು ಮತ್ತು ಪೊಲೀಸರ ಕರ್ತವ್ಯಗಳ ಬಗ್ಗೆ ಮಾಹಿತಿ ನೀಡುವ ವಿವಿಧ ರೀತಿಯ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಬಹಳ ಪ್ರಾಮುಖ್ಯವಾದ ಒಂದು ವಿಷಯ "ಮಹಿಳಾ ದೌರ್ಜನ್ಯ." ಈ ವಿಷಯದ ಮೇಲೆ ಚರ್ಚೆಗಳನ್ನು ಇಲ್ಲವೇ ವಿಚಾರಸಂಕಿರಣವನ್ನು ಕಾಲೇಜು ಮಕ್ಕಳಿಗಾಗಿ ಏರ್ಪಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು.

ಅಪರಾಧ ತಡೆ ಮಾಸಾಚರಣೆ ಕಾರ್ಯಕ್ರಮ ನಡೆಸುವ ಬಗ್ಗೆ ಶಾಲಾ ಕಾಲೇಜುಗಳ ಮುಖ್ಯಸ್ಥರು, ಎನ್.ಎಸ್.ಎಸ್., ಎನ್.ಸಿ.ಸಿ ಅಧಿಕಾರಿಗಳೊಂದಿಗೆ ಪೊಲೀಸ್ ಅಧಿಕಾರಿಗಳು ಪೂರ್ವಬಾವಿ ಸಭೆ ನಡೆಸಿದಾಗ ಮಹಿಳಾ ದೌರ್ಜನ್ಯದ ವಿಷಯ ಚರ್ಚೆಗೆ ಬಂದು ಪೊಲೀಸ್ ಇಲಾಖೆ ಮತ್ತು ಮಹಿಳಾ ಸಂಘಟನೆ ಜೊತೆ ಸೇರಿಕೊಂಡು ಜಂಟಿಯಾಗಿ ಮಾಡುವ ತೀರ್ಮಾನಕ್ಕೆ ಬರಲಾಯಿತು.

ಅಂತೆಯೇ ಮಹಿಳಾ ದೌರ್ಜನ್ಯದ ಬೇರೆ ಬೇರೆ ಮಜಲುಗಳ ಬಗ್ಗೆ ವಿವರವಾದ ವಿಷಯ ಮಂಡನೆಯನ್ನು ಕುಶಾಲನಗರದ ಠಾಣಾಧಿಕಾರಿ ಡಿ.ಡಿ. ರಾಜು ಮಂಡಿಸುತ್ತಾ ಯಾವ ತರಹದ ಅಪರಾಧಕ್ಕೆ ಯಾವ ರೀತಿಯಲ್ಲಿ ಶಿಕ್ಷೆಯಾಗುತ್ತದೆ ಮತ್ತು ಯಾವ ಸೆಕ್ಷನ್ ಪ್ರಕಾರ ಎಷ್ಟು ತೀಕ್ಷ್ಣ ಸ್ವರೂಪದ ಶಿಕ್ಷೆಯಾಗುತ್ತದೆ ಎಂಬುದನ್ನು ವಿದ್ಯಾರ್ಥಿಗಳಿಗೆ ಮನದಟ್ಟಾಗುವ ರೀತಿಯಲ್ಲಿ ಮಂಡಿಸಿದರು.

ಮಂಡನೆಯ ಆರಂಭ ಮನುಸ್ಮೃತಿಯಿಂದ ಮೊದಲ್ಗೊಂಡು ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹ, ಹೆಣ್ಣು ಶಿಶುವಿನ ಮಾರಾಟ, ಇಲ್ಲವೆ ಲೈಂಗಿಕ ದೌರ್ಜನ್ಯ, ಅತ್ಯಾಚಾರ, ವೇಶ್ಯಾವಾಟಿಕೆ, ವರದಕ್ಷಿಣೆ ಸಮಸ್ಯೆ, ಕಾನೂನಿನಲ್ಲಿರುವ ತೊಡಕುಗಳು ಮತ್ತು ಅವಕಾಶಗಳು, ಪೊಲೀಸರು ಮತ್ತು ಇತರ ಗೌರವಾನ್ವಿತ ಸ್ಥಾನದಲ್ಲಿರುವ ಅಧಿಕಾರಿಗಳಿಂದ ಮಹಿಳೆಗೆ ತೊಂದರೆ ಆದಾಗ ಅವರಿಗಾಗುವ ಶಿಕ್ಷೆಯ ತೀವ್ರತೆ ಹೀಗೆ ಮತ್ತು ಹಲವು ವಿಷಯಗಳ ಬಗ್ಗೆ ತುಂಬಾ ಕಳಕಳಿಯಿಂದ ಎಸ್.ಪಿ. ವಿದ್ಯಾರ್ಥಿಗಳಿಗೆ ವಿವರಣೆ ನೀಡಿದರು.

ಬೇರೆ ಬೇರೆ ವಯೋಮಿತಿಯ ಮತ್ತು ಬೇರೆ ಬೇರೆ ರೀತಿಯ ಶಿಕ್ಷಣ ಸಂಸ್ಥೆಗಳಲ್ಲಿ ನಡೆದ ಈ ಕಾರ್ಯಕ್ರಮ ತುಂಬಾ ಕುತೂಹಲಕಾರಿಯಾಗಿತ್ತು. ಅತ್ಯುತ್ತಮ ಹಾಗೂ ಪ್ರೌಢಿಮೆಯ ಪ್ರಶ್ನೆಗಳನ್ನು ಕೇಳಿ ಅದಕ್ಕೆ ಉತ್ತರಗಳನ್ನು ಪಡೆಯಲಿಚ್ಛಿಸಿದ ವಿದ್ಯಾರ್ಥಿಗಳ ಮನೋಸ್ಥೈರ್ಯ ಮತ್ತು ಕುತೂಹಲದ ಬಗ್ಗೆ ತುಂಬಾ ಮೆಚ್ಚುಗೆ ಅನಿಸಿತು. ಸಾಮಾಜಿಕ ಕಳಕಳಿಯ ಪ್ರಶ್ನೆಗಳನ್ನೇ ಅತಿಯಾಗಿ ಎತ್ತಿದ ಹೆಣ್ಣು ಮಕ್ಕಳು ತಮ್ಮ ಸುತ್ತ ಮುತ್ತಲ ಪರಿಸರದಲ್ಲಿ ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ಸೂಕ್ಷ್ಮವಾಗಿ ಗ್ರಹಿಸಿದ ಪ್ರಶ್ನೆಗಳು ನಿಜಕ್ಕೂ ಗಮನಾರ್ಹವಾಗಿದ್ದವು.

ಅನೈತಿಕ ಸಂಬಂಧಗಳ ಕುರಿತ ಕಾನೂನಿನ ಬಗ್ಗೆ ಚರ್ಚೆ ನಡೆದಾಗ ಗೊಂದಲಕ್ಕೆ ಈಡಾದ ವಿದ್ಯಾರ್ಥಿಗಳು ಕಾನೂನು ಮತ್ತು ನ್ಯಾಯಾಲವನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ಸಂದೇಹ ವ್ಯಕ್ತಪಡಿಸಿದ ಪರಿಣಾಮ ಸುದೀರ್ಘ ಚರ್ಚೆ ನಡೆಯಿತು. ತಪ್ಪಿತಸ್ಥರು ಯಾರೇ ಆಗಲಿ ಅವರೂ ಶಿಕ್ಷಾರ್ಹರು. ಬರೀ ಒಬ್ಬರ ಹೇಳಿಕೆಗೆ ತಲೆ ಬಾಗುವುದು ಕಾನೂನು ಅಲ್ಲ. ಕೂಲಂಕುಶ ತನಿಖೆ ನಡೆಸಿದ ಮೇಲೆಯೇ ನ್ಯಾಯಾಲಯ ತೀರ್ಪು ನೀಡುವುದು ಎಂದು ವಿದ್ಯಾರ್ಥಿಗಳಿಗೆ ಸರ್ಕಲ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ ಹಾಗೂ ವೇದಿಕೆಯ ಕಾನೂನು ಸಲಹೆಗಾರರಾದ ಕುಮಾರಿ ರೇಣುಕಾ ತುಂಬಾ ತಾಳ್ಮೆಯಿಂದ ಉತ್ತರಿಸಿದರು.

ಕಾಲೇಜಿಗೆ ಹೋಗಿ-ಬರುವ ದಾರಿಯಲ್ಲಿ ಇಲ್ಲವೇ ಬಸ್‌ನಲ್ಲಿ ಪ್ರಯಾಣಿಸುವಾಗ ಅಥವಾ ಇನ್ನಾವುದೇ ಸಂಧರ್ಭದಲ್ಲಿ ಹೆಣ್ಣಿನ ಗೌರವಕ್ಕೆ ಧಕ್ಕೆ ಬರುವಂತಹ ರೀತಿಯಲ್ಲಿ ಪುರುಷರು ವರ್ತಿಸಿದಾಗ ಹೆಣ್ಣು ತನ್ನ ಮೌನ ಮುರಿದು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಕೊಡಬೇಕು. ಲಿಖಿತ ದೂರು ಕೊಡುವುದು ಒಪ್ಪಿಗೆಯಿಲ್ಲದೇ ಹೋದರೆ ದೂರವಾಣಿ ಮೂಲಕ ಖಚಿತವಾದ ಮಾಹಿತಿ ಒದಗಿಸಿದರೆ ಅಂತಹ ಕಿಡಿಗೇಡಿಗಳ ಮೇಲೆ ಕ್ರಮಕೈಗೊಂಡು ಭಾರತೀಯ ದಂಡ ಸಂಹಿತೆ 354ರ ಪ್ರಕಾರ ಶಿಕ್ಷಿಸಲಾಗುವುದು ಎಂದರು.

ಮೋಜಿಗಾಗಿ ಹೆಣ್ಣಿಗೆ ಕೀಟಲೆ ಮಾಡುವುದು ಕೂಡಾ ಐಪಿಸಿ 509ರ ಪ್ರಕಾರ ದಂಡಾರ್ಹವಾಗಿರುತ್ತದೆ ಎಂದರಲ್ಲದೆ ಅನಿಷ್ಟ ಪದ್ಧತಿಯ ನಿರ್ಮೂಲನೆ ಯಾಗಬೇಕಾದರೆ ಕಾನೂನಿನ ಅರಿವು ಅಗತ್ಯ. ಬಾಲ್ಯ ವಿವಾಹದಲ್ಲಿ ಮದುವೆ ಮಾಡಿಸಿದ ತಂದೆ ತಾಯಿ ಮಾತ್ರವಲ್ಲದೆ ಪುರೋಹಿತ ಕೂಡಾ ಅಪರಾಧಿಯಾಗುತ್ತಾನೆ. ಅಂದರೆ ಅವನೊಬ್ಬ ಪ್ರಮುಖ ಸಾಕ್ಷಿಯಾಗುತ್ತಾನೆ.

ಸಾಮಾಜಿಕ ಕೀಳರಿಮೆಯ ಕಾರಣದಿಂದಾಗಿ ಮಹಿಳೆ ಎಲ್ಲ ರೀತಿಯ ಶೋಷಣಗೆ ಒಳಗಾಗಿದ್ದಾಳೆ. ಅತ್ಯಾಚಾರವು ಸಾಮಾನ್ಯವಾಗಿ ಕಂಡುಬರುವ ಅಪರಾಧ ಒಬ್ಬ ಗಂಡಸೂ ಹೆಂಗಸಿನ ಮೇಲೆ ಅತ್ಯಾಚಾರ ಮಾಡಿದ್ದಾನೆಂದು ನ್ಯಾಯಾಲಯದಲ್ಲಿ ರುಜುವಾತಾದರೆ ಆತನನ್ನು ಕಡೇಪಕ್ಷ 7 ವರ್ಷ ಸೆರೆವಾಸಕ್ಕೆ ದೂಡಲಾಗುವುದು. ಕೆಲವೊಮ್ಮೆ ನ್ಯಾಯಾಲಯವು ಆರೋಪಿಯನ್ನು ಜೀವನ ಪರ್ಯಂತ ಕಾರವಾಸದಲ್ಲಿಡಬಹುದು. ಕೆಲವು ಪ್ರಕರಣಗಳಲ್ಲಿ ಕನಿಷ್ಠ ದಂಡನೆಯ 10 ವರ್ಷಗಳ ಸೆರೆಮನೆ ವಾಸವಾಗಿರುತ್ತದೆ.

ಹತ್ತು ವರ್ಷದ ಬಾಲಕ ಕೂಡಾ, ತಾನು ಏನು ಮಾಡುತ್ತಿದ್ದೇನೆ ಎಂಬುದನ್ನು ಅರಿಯುವಷ್ಟು ತಿಳುವಳಿಕೆ ಆತನಿಗೆ ಇದ್ದರೆ, ಅತ್ಯಾಚಾರಿ ಎಂದೇ ಕಾನೂನು ಪರಿಗಣಿಸುತ್ತದೆ.

ಪ್ರಭಾವೀ ಸ್ಥಾನದಲ್ಲಿರುವ ಕೆಲವು ವ್ಯಕ್ತಿಗಳು ತನ್ನ ರಕ್ಷಣೆಯಲ್ಲಿರುವ ಹೆಂಗಸಿನ ಮೇಲೆ ಅತ್ಯಾಚಾರ ನಡೆಸಿದರೆ ಹತ್ತು ವರ್ಷದ ಸೆರಮನೆವಾಸ ಇಲ್ಲವೇ ಅದಕ್ಕೂ ಹೆಚ್ಚಿನ ಶಿಕ್ಷೆ ಅಥವಾ ಅಜೀವ ಕಾರವಾಸ ಶಿಕ್ಷೆ ಕೂಡಾ ವಿಧಿಸಲಾಗುವುದು.

ಈ ವ್ಯಕ್ತಿಗಳು ಪೊಲೀಸಿನವರಾಗಿರಬಹುದು, ಸಾರ್ವಜನಿಕ ನೌಕರರಿರಬಹುದೆಂದು ಬಂಧೀಖಾನೆ, ರಿಮ್ಯಾಂಡ್ ಹೋಂ, ಆಸ್ಪತ್ರೆ ಮ್ಯಾನೇಜರು ಅಥವಾ ಸಿಬ್ಬಂದಿ ಕೂಡಾ ಆಗಿರಬಹುದು. ಇವರಿಗೆ ಹೆಚ್ಚಿನ ಶಿಕ್ಷೆಯ ಅಗತ್ಯತೆ ಯಾಕೆಂದರೆ ಇಂತಹ ವ್ಯಕ್ತಿಗಳ ಅಭಿರಕ್ಷೆಯಲ್ಲಿರುವ ಮಹಿಳೆಯು ಪ್ರತಿಭಟಿಸಲಾರದಂತಹ ಸ್ಥಾನದಲ್ಲಿರುತ್ತಾಳೆ. ಅಲ್ಲಿ ಮಹಿಳೆಯರನ್ನು ರಕ್ಷಿಸುವ ಜವಾಬ್ದಾರಿ ಆ ಅಧಿಕಾರಿಯದ್ದಾಗಿರುತ್ತದೆ. ಆ ಜವಾಬ್ದಾರಿಯನ್ನು ಮರೆತು ಅವನು ಎಸಗಿತ ಅಪರಾಧಕ್ಕೆ ಉಗ್ರ ಶಿಕ್ಷೆ ನೀಡಬೇಕು ಎಂದು ಸರಕಾರವು ನಿಯಮ ರಚಿಸಿದೆ.

ಆದುದರಿಂದ ಅನ್ಯಾಯಕ್ಕೊಳಗಾದ ಮಹಿಳೆಯರೂ ಅಪರಾಧಿಗೆ ಶಿಕ್ಷೆಯಾಗಬೇಕಾದರೆ ಧೈರ್ಯವಹಿಸಿ ಕಾನೂನು ಸಮರ ನಡೆಸಬೇಕಾಗಿದೆ. ನಮ್ಮ ದೇಶದಲ್ಲಿ ಮಹಿಳೆಯರಿಗಾಗಿಯೇ ಇನ್ನೂ ರಕ್ಕೂ ಹೆಚ್ಚು ಕಾನೂನುಗಳಿವೆ. ಆದರೆ ಶೇಕಡಾ 90 ಮಹಿಳೆಯರಿಗೆ ಇದರ ಅರಿವಿಲ್ಲದಿರುವುದೇ ನಮ್ಮ ದೇಶದ ದುರಂತ. ಈ ಅರಿವಿನ ಕೊರತೆಯಿಂದಾಗಿ ಆಕೆಯ ಮೇಲಿನ ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬಾರದೆ ಅಪರಾಧಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ಎಲ್ಲಿ ಸ್ತ್ರೀ ಪೂಜಿಸಲ್ಪಡುತ್ತಾಳೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂಬ ಮಾತೊಂದಿತ್ತು. ಆದರೆ ಅದೇ ಸಮಾಜ ಆಕೆಯನ್ನು ವರದಕ್ಷಿಣೆಗಾಗಿ ಪೀಡಿಸಿ ಬೆಂಕಿಗೆ ತಳ್ಳುವ ಸ್ಥಿತಿ ನಿರ್ಮಾಣವಾಗಿರುವುದು ದೊಡ್ಡ ದುರಂತ. ವರದಕ್ಷಿಣೆ ಒಂದು ಅನಿಷ್ಟ ಪೀಡೆಯಾಗಿ ಬೃಹದಾಕಾರವಾಗಿ ಬೆಳೆದಿದೆ. ಇಂದು ವರದಕ್ಷಿಣೆ ಪ್ರತಿಷ್ಠೆಯ ಸಂಕೇತವಾಗಿದೆ. ಇದರ ಪರಿಣಾಮ ಎಷ್ಟೊಂದು ಭಯಾನಕ, ಅಮಾನುಷವಾಗಿದೆಯೆಂದರೆ ಪ್ರತಿನಿತ್ಯವೂ ಪತ್ರಿಕೆಗಳಲ್ಲಿ ಅಸಂಖ್ಯಾತ ವರದಕ್ಷಿಣೆ ಸಾವು, ಆತ್ಮಹತ್ಯೆ ಪ್ರಕರಣಗಳನ್ನು ಓದುತ್ತಿದ್ದೇವೆ. ಹೆಣ್ಣು ವರದಕ್ಷಿಣೆ ಎಂಬ ಭೂತದ ಬಾಯಿಗೆ ಸಿಕ್ಕಿ ಜರ್ಜರಿತಳಾಗಿ ನಡೆಯುತ್ತಿದ್ದಾಳೆ. ವರದಕ್ಷಿಣೆ ವಿರೋಧಿ ಕಾಯಿದೆ 30 ವರ್ಷಗಳ ಹಿಂದೆಯೇ ರಚಿತವಾಗಿದ್ದರೂ ಈ ಕಾನೂನನ್ನು ಸರಿಯಾಗಿ ಬಳಸದಿರುವುದು ವರದಕ್ಷಿಣೆಯಂತಹ ಅನಿಷ್ಠ ಪದ್ಧತಿ ಇನ್ನೂ ಜೀವಂತವಾಗಿರಲು ಕಾರಣವಾಗಿದೆ.

ಭಾರತ ದಂಡ ಸಂಹಿತೆ 498 ಎ ಪ್ರಕಾರ ಒಬ್ಬ ಮಹಿಳೆಯನ್ನು ಕ್ರೌರ್ಯಕ್ಕೆ ಒಳಪಡಿಸುವಂತಹ ಅವಳ ಪತಿ ಅಥವಾ ಪತಿಯ ಸಂಬಂಧಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರವಾಸ ಮತ್ತು ಜುಲ್ಮಾನೆಯಿಂದ ದಂಡಿತರಾಗುತ್ತಾರೆ.

ಮದುವೆಯಾಗಿ ಏಳು ವರ್ಷಗಳೊಳಗಾಗಿ ಅಸ್ವಾಭಾವಿಕವಾಗಿ ಮೃತ ಆದರೆ ಅವಳ ಗಂಡ, ಅತ್ತೆ ಮಾವಂದಿರನ್ನು ಅವಳ ಸಾವಿಗೆ ಜವಾಬ್ದಾರರನ್ನಾಗಿ ಮಾಡಲಾಗುವುದು ಮಾತ್ರವಲ್ಲ ತಪ್ಪಿತಸ್ಥರೆಂದೂ ಕಂಡುಬಂದರೆ ಏಳು ವರ್ಷಗಳವರೆಗೆ ಜೈಲಿಗೆ ಕಳುಹಿಸಲಾಗುವುದು. ಈ ಅಪರಾಧವನ್ನು ಸಾಬೀತುಪಡಿಸುವ ಅಗತ್ಯವಿಲ್ಲ. ಮರಣದ ಸ್ಪಷ್ಟ ಕಾರಣಗಳ ವರದಿಯನ್ನು ತಾಲೂಕು ಮ್ಯಾಜಿಸ್ಟ್ರೇಟರು ಸಿದ್ಧಪಡಿಸಬೇಕು. ಮರಣೋತ್ತರ ಪರೀಕ್ಷೆಯನ್ನು ಇಬ್ಬರು ವೈದ್ಯರು ಮಾಡುವರು ಜೊತೆಗೆ ಇನ್ ಕ್ಯಾಮರಾ ಸೌಲಭ್ಯ ಕೂಡಾ ಇತ್ತೀಚೆಗೆ ಬಳಕೆಯಲ್ಲಿದೆ.

ಆದರೆ ಕಾನೂನಲ್ಲಿರುವ ಅವಕಾಶಗಳ ಬಗ್ಗೆ ಜನರಿಗೆ ಸೂಕ್ತ ಮಾಹಿತಿ ಇಲ್ಲದಿರುವುದೂ ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ ಅರಿವಿನ ಕೊರತೆ ಇರುವುದರಿಂದ ಅದನ್ನು ಉಪಯೋಗಿಸಿಕೊಳ್ಳದಿರುವುದೇ ಅಪರಾಧಗಳ ಸಂಖ್ಯೆಯಲ್ಲಿ ಹೆಚ್ಚಳವಾಗಲು ಕಾರಣವಾಗಿದೆ ಮಾತ್ರವಲ್ಲ ಪ್ರಭಾವೀ ವ್ಯಕ್ತಿಗಳಿಗೆ ಹಣ ಬಲಕ್ಕೆ ಮಣಿದು ಜವಾಬ್ದಾರಿಯುತ ಸ್ಥಾನದಲ್ಲಿರುವ ಕೆಲವು ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸುವುದು ಕೂಡಾ ಕಾರಣ ಎಂಬುದು ಕಟು ಸತ್ಯ. ಆದರೆ ಇದೆಲ್ಲಕ್ಕೂ ಹೆದರಿಯೋ। ಅಥವಾ ಪೊಲೀಸರ ಬಗ್ಗೆ ನಮಗಿರುವ ತಾತ್ಸಾರ ಮತ್ತು ಭಯದಿಂದಲೋ। ನಾವು ಕಾನೂನಿನ ಮೊರೆ ಹೋಗುವುದನ್ನು ಕೈ ಬಿಡುವುದರಿಂದ ಮಹಿಳೆಯರ, ದಲಿತರ, ಬಡವರ ಮೇಲಿನ ದೌರ್ಜನ್ಯ ಹೆಚ್ಚುತ್ತಾ ಹೋಗುತ್ತದೆ.

ಈ ದುರಂತಗಳಿಂದ ಜನರನ್ನು ಪಾರು ಮಾಡಿ ಅರಿವು, ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜನಪರ ಕೆಲಸ ಮಾಡುವ ಸಂಘಟನೆಗಳು, ಮಹಿಳಾ ಸಂಘಟನೆಗಳೂ ನಿರಂತರವಾಗಿ ಕಾನೂನಿನ ತಿಳುವಳಿಕೆ ನೀಡುವ ಸಂವಾದ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶದಲ್ಲಿ ಜನರಿಗಾಗಿ ಹಮ್ಮಿಕೊಳ್ಳುವ ಅವಶ್ಯಕತೆ ಇದೆ.

ಈ ನಿಟ್ಟಿನಲ್ಲಿ ಜಾಗೃತ ಮಹಿಳಾ ವೇದಿಕೆಯು ಒಂದು ದೃಢವಾದ ಹೆಜ್ಜೆಯನ್ನು ಇಟ್ಟಿದೆ. ಗಂಡು ಮತ್ತು ಹೆಣ್ಣಿನ ಸಮಾನ ಸ್ಥಾನಮಾನಕ್ಕಾಗಿ ಹೋರಾಟ ನಡೆಸುವ ಸದುದ್ದೇಶದಿಂದ ಕೆಲಸ ಮಾಡುವ ಈ ವೇದಿಕೆ ತನ್ನ ಮುಂದಿನ ದಿನಗಳಲ್ಲಿ ಕಾನೂನು ತಜ್ಞರು ಹಾಗೂ ಇಲಾಖಾ ಅಧಿಕಾರಿಗಳೊಂದಿಗೆ ಸೇರಿ ನಿರಂತರವಾಗಿ ಮಹಿಳಾ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ.

\- ಜಯಶ್ರೀ ಕುಮಾರ

ಮೂಲಭೂತವಾದದ ಎರಡು ಮುಖಗಳು

ಆಫ್ಘಾನಿಸ್ಥಾನದಲ್ಲಿ ಈ ತಿಂಗಳ ಮೊದಲ ವಾರದಲ್ಲಿ ನಡೆದಂಥ ಕೃತ್ಯ ಎಂದೂ ಯಾರೂ ಕ್ಷಮಿಸಲಾರದಂಥ ಪಾಶವೀಕೃತ್ಯ. ತನ್ನ ವಿಗ್ರಹಗಳನ್ನು ಧ್ವಂಸಮಾಡಿದರೆಂದು ಬುದ್ಧನಿಗೇನು ವೈಯಕ್ತಿಕವಾಗಿ ಅವಮಾನವಾಗುವ ಪ್ರಶ್ನೆಯೇ ಇಲ್ಲ. ಇಂಥ ಬರ್ಬರಕೃತ್ಯ ಒಬ್ಬ ಮಹಾನ್ ವ್ಯಕ್ತಿಯನ್ನು ಯಾವ ರೀತಿಯಲ್ಲೂ ಕುಗ್ಗಿಸುವುದಿಲ್ಲ. ಆದರೆ ಆಗಿರುವ ಅವಮಾನ ಮನುಷ್ಯ ಕುಲಕ್ಕೆ- ಕೇವಲ ಆಫ್ಘಾನಿಸ್ಥಾನದ ಪ್ರಜೆಗಳಿಗಲ್ಲ - ಇಡೀ ಜಗತ್ತಿನ ಮನುಷ್ಯಕುಲಕ್ಕೇ. ಪ್ರಗತಿಯ ಹಾದಿಯಲ್ಲಿ ನಡೆಯುತ್ತಿದ್ದೇವೆ, ನಾಗರಿಕರಾಗುತ್ತಿದ್ದೇವೆ, ಮನುಷ್ಯರಾಗುತ್ತಿದ್ದೇವೆ ಎಂಬ ಭ್ರಮೆಯಲ್ಲಿ ಬದುಕುತ್ತಿರುವ ಈ ಆಧುನಿಕಯುಗದ ಪ್ರತಿಯೋರ್ವನೂ ಅವಮಾನದಿಂದ, ನಾಚಿಕೆಯಿಂದ ತಲೆತಗ್ಗಿಸುವಂಥ ಸಂದರ್ಭ ಇದು. ಹೀಗೆ ಬುದ್ಧನ ಪ್ರತಿಮೆಗಳನ್ನು, ಆತನ ವಿಗ್ರಹಗಳನ್ನು ನಾಶಪಡಿಸಿದುದಕ್ಕೆ ಧಾರ್ಮಿಕ ವಿವರಣೆಗಳನ್ನು ಕೊಡುತ್ತಿರುವುದು ಕೂಡ ಮನುಷ್ಯನ ವಿಕೃತ ಮನಸ್ಸಿನ ಸೂಚಕವಷ್ಟೇ. ಇಸ್ಲಾಂಧರ್ಮದ ಪಾವಿತ್ರ್ಯವನ್ನು ಉಳಿಸುವುದಕ್ಕಾಗಿ, ಇಸ್ಲಾಂ ಪ್ರತಿನಿಧಿಸದ ಯಾವುದೇ ಚಿಹ್ನೆಯನ್ನು, ಲಾಂಛನವನ್ನು ಅಳಿಸಿಹಾಕಿಬಿಡುವ ಘೋರನಿರ್ಧಾರ ಮಾಡಿದ್ದಾರೆ ಆಫ್ಘನ್ 'ಧಾರ್ಮಿಕ ಶಕ್ತಿಗಳು'. ಈ ವರ್ತನೆ, ಈ ವಿಚಾರದೃಷ್ಟಿ ಇಂಥ ವಾದ ಮಹಮ್ಮದ್ ಪೈಗಂಬರರಂಥ ಪ್ರವಾದಿಗೇ ಎಷ್ಟು ತೃಪ್ತಿ, ಸಮಾಧಾನ ತರುತ್ತಿತ್ತೋ ನನಗೆ ಗೊತ್ತಿಲ್ಲ. ಪೈಗಂಬರರಾಗಲಿ, ಬುದ್ಧನಾಗಲಿ, ಕ್ರಿಸ್ತನಾಗಲಿ ಜೀವಪರಧೋರಣೆ, ಜೀವಪೋಷಕ ಶಕ್ತಿಗಳಾಗಿರಲಿಲ್ಲ. ಇಂಥ ಪ್ರಾಥಮಿಕ ಅಂಶವನ್ನು ಇಷ್ಟು ಸಾವಿರ ವರ್ಷಗಳು ಕಳೆದ ಮೇಲೂ ಏನನ್ನೋ ಬಹು ಹೊಸದು ಹೇಳುತ್ತಿರುವಂತೆ ಹೇಳಬೇಕಾಗಿ ಬಂದಿರುವ ನಮ್ಮ ಸ್ಥಿತಿಗೆ ನಾವು ಮರುಕಪಟ್ಟುಕೊಳ್ಳಬೇಕು ಅಷ್ಟೇ. ಧರ್ಮದ ಹೆಸರಿನಲ್ಲಿ ಆಫ್ಘಾನಿಸ್ಥಾನದಲ್ಲಿ ಇಂದು ಹೆಣ್ಣು ಮಕ್ಕಳು ಶಾಲೆಗಳಿಗೆ ಹೋಗುವ ಹಾಗಿಲ್ಲ, ಕೆಲಸಗಳಿಗೆ ಹೋಗುವ ಹಾಗಿಲ್ಲ. ಇಡೀ ನಾಡಿನಲ್ಲಿ ಸಂಗೀತ, ನಾಟಕ, ನೃತ್ಯಗಳೆಲ್ಲ ಬಹಿಷ್ಕೃತವಾಗಿವೆ ಮತ್ತು ಟಿವಿ ಕೂಡ. ಧರ್ಮವೆಂದರೆ ಭಯ. ಭಯವೆಂದರೆ ದೇವರ ಭಯವಲ್ಲ - ಆ ದೇವರ ವಾಣಿಯನ್ನು ಅರ್ಥೈಸುವ, ವ್ಯಾಖ್ಯಾನಿಸುವ, ಫತ್ವಾಗಳನ್ನು ಹೊರಡಿಸುವ ಶಕ್ತಿಗಳ ಬಗ್ಗೆ ಭಯ. ತಾಲಿಬ್ ಇಸ್ಲಾಂಧರ್ಮ ಈ ತಾಲಿಬಾನರ ಕೈಗೆ ಸಿಕ್ಕು ನಲುಗಿಹೋಗುತ್ತಿದೆ. ವಿಶ್ವದ ಬೇರ ಭಾಗಗಳಲ್ಲಿನ - ಬಹುಶಃ ಅಂಥ ಮುಸಲ್ಮಾನರು ಆಫ್ಘಾನಿಸ್ಥಾನದಲ್ಲಿಯೂ ಇರಲೇಬೇಕು - ಪ್ರಾಮಾಣಿಕ ಮುಸಲ್ಮಾನರು ತಮ್ಮ ಸಹಧರ್ಮೀಯರ ಅಮಾನುಷಕೃತ್ಯವನ್ನು ಕಂಡು ಹೇಸಿಗೆಪಟ್ಟುಕೊಂಡಿರಬೇಕು, ಕಸಿವಿಸಿಪಟ್ಟಿರಬೇಕು. ತಮ್ಮ ಕೈಯಲ್ಲಿ ಇಂಥ ಸಂಕಟದ ಸಮಯದಲ್ಲಿ ಏನೂ ಮಾಡಲಿಕ್ಕಾಗದೆ ಕೇವಲ ನಿಷ್ಪ್ರಯೋಜಕವಾಗಿ ಮರುಕಪಡುವುದೊಂದೇ ಆಯಿತಲ್ಲ ಎಂದು ಕೊರಗುತ್ತಿರಬೇಕು.

ಈ ಸಂದರ್ಭದಲ್ಲಿ ಇಡೀ ಜಗತ್ತಿನ ಜನತೆ ಜಾಗ್ರತೆಗೊಳ್ಳಬೇಕು. ದೇಶ, ಧರ್ಮವೆನ್ನದೆ ಇಡೀ ಮನುಷ್ಯ ಕುಲ ಒಟ್ಟಾಗಿ ನಿಲ್ಲಬೇಕು. ಇಂಥ ಖಂಡನೆ ಕೇವಲ ಸರಕಾರಗಳು ಮಾತ್ರ ಮಾಡಿದರೆ ಸಾಲದು. ರಾಜಕೀಯ ಮಿತಿಗಳನ್ನು ಮೀರಬೇಕು ಇಂದಿನ ನಮ್ಮ ಪ್ರತಿಕ್ರಿಯಾರೀತಿ. ಮತ್ತು ಈ ಸಮಯದಲ್ಲಿ ಪ್ರತಿಯೊಬ್ಬ ನಾಗರಿಕನೂ ತನ್ನೊಳಗೇ ತನ್ನ ದೃಷ್ಟಿ ಹರಿಸಬೇಕು. ತನ್ನನ್ನು ತಾನು ಪರೀಕ್ಷಿಸಿಕೊಳ್ಳಬೇಕು. ಇಂಥ ಘೋರ ಅಚಾತುರ್ಯ ನಡೆದದ್ದು ಜಗತ್ತಿನ ಒಂದು ಮೂಲೆಯಲ್ಲಷ್ಟೇ ತಾನೇ ಎಂಬ ಭಾವನೆ ನಮ್ಮನ್ನು ನಾವು ಮತ್ತೆ ನಮ್ಮ ಮುಸುಕಿನೊಳಗೇ ಸೆಳೆದುಕೊಂಡಂತೆ. ನಮ್ಮ ನಮ್ಮ ಆತ್ಮತೃಪ್ತಿ, ಅಲ್ಪತನದ ಸ್ವಯಂನಿರ್ಮಿತ ಕೂಪದೊಳಗೆ ತಳ್ಳಿಕೊಂಡು ನಮ್ಮ ದಿನಗಳನ್ನು ತಳ್ಳಲು ನಿರ್ಧರಿಸಿದಂತೆ. ಆಫ್ಘಾನಿಸ್ಥಾನದಲ್ಲಿ ನಾವು ಇಂದು ಪ್ರಕಟವಾಗಿ ಕಾಣುತ್ತಿರುವ ಅಸಹನೆ, ಹಿಂಸೆ, ವಿಧ್ವಂಸಕರೀತಿಗಳು - ಗುಟ್ಟಾಗಿ, ಮೂಲೆಯಲ್ಲಿ ನಮ್ಮಲ್ಲಿಯೇ ಎಲ್ಲಿಯೋ ಮನೆ ಮಾಡಿಲ್ಲವೆ ಎಂದು ಬಹು ಧೈರ್ಯವಾಗಿ, ನಿಸ್ಸಂಕೋಚವಾಗಿ ಪರೀಕ್ಷಿಸಿಕೊಳ್ಳಬೇಕಾದ ಸಮಯ ಇದು. ಇಂಥ ಸಂದರ್ಭಗಳು ಮನುಷ್ಯನ ಇತಿಹಾಸದಲ್ಲಿ ಪದೇ ಪದೇ ಬಂದು ಒದಗುತ್ತಿರುತ್ತವೆ. ಹಿಟ್ಲರ್, ಸ್ಟಾಲಿನ್, ಮುಸಲೋನಿ, ಇದೀ ಅಮೀನ್‌ರುಗಳು ಪಾತಾಳದಿಂದ ಹೊಮ್ಮಿದ ಪೈಶಾಚಿಕ ಶಕ್ತಿಗಳಲ್ಲ. ನಮ್ಮೊಳಗೇ ಶತಮಾನಗಳ ಕಾಲ ಪಾಕಗೊಳ್ಳುತ್ತ, ಗಟ್ಟಿಯಾಗುತ್ತ ನಮ್ಮ ವ್ಯಕ್ತಿತ್ವವನ್ನು, ನಮ್ಮ ಮನುಷ್ಯ ಸಂಬಂಧಗಳನ್ನು ವಿಷಗೊಳಿಸುತ್ತ ಹೋಗುವ ಜೀವದ್ವೇಷದ ಸಾಕಾರಮೂರ್ತಿಗಳು ಇವರುಗಳು ಅಷ್ಟೆ. ಆದ್ದರಿಂದ

ಕೊನೆಗೂ ಹೊಣೆಗಾರಿಕೆ ನಮ್ಮದೆ. ನೈತಿಕ ಜವಾಬ್ದಾರಿ ನಮ್ಮದೆ. ನಮ್ಮ ಕೂಪಗಳನ್ನು ಬಿಟ್ಟು ಹೊರಬರಬೇಕಾದ ಕ್ಷಣ ಇದು. ನಮ್ಮ ಮೇಲೆ ನಾವು ನಮ್ಮ ಸುಭದ್ರತೆಗಾಗಿ ಎಳೆದುಕೊಂಡ ತಪ್ಪುಗಳನ್ನು ಭೇದಿಸಿಕೊಂಡು ಈಗ ಸುತ್ತ ನೋಡುವುದನ್ನು, ಕೇಳುವುದನ್ನು ಕಲಿಯಬೇಕು. ನೋಡಿ ಕೇಳಿದರಷ್ಟೆ ಸಾಲದು. ಕ್ರಿಯಾಶೀಲರಾಗಬೇಕು.

ಇಂಥ ಧೀರೋದಾತ್ತವಾದ ನಿರ್ಧಾರಗಳನ್ನು ಮಾಡುತ್ತಿದ್ದಂತೆಯೇ ಕಾಗದದ ಮೇಲೆ ಅಕ್ಷರಗಳು ಮೂಡುತ್ತಿದ್ದಂತೆಯೇ ಮನಸ್ಸು ಮಾತ್ರ ವಿಚಿತ್ರವಾಗಿ ಪರಪರಗುಟ್ಟಲಾರಂಭಿಸುತ್ತದೆ. ಸಣ್ಣ ಪುಟ್ಟ ಸೂಜಿಚುಚ್ಚುಗಳಿಂದ ಅಸ್ತವ್ಯಸ್ತವಾಗುತ್ತದೆ.

ಆಫ್ಘಾನಿಸ್ಥಾನದತ್ತ ಬೊಟ್ಟು ಮಾಡುವುದಕ್ಕೆ ನಮ್ಮ ಕೈಗಳೆಷ್ಟು ಶುದ್ಧವಾಗಿದೆ ಎಂಬ ಪ್ರಶ್ನೆ ಕಾಡುತ್ತದೆ. 'ಅನಾಗಾರಿಕ' 'ಪಾಶವೀ' 'ಬರ್ಬರ' ಎಂದೆಲ್ಲ ವರ್ಣಿಸುವ ನಾಲಗೆಗೆ ಪರರ ಕುರಿತು ಆಡುವುದಕ್ಕೆ ಏನು ಹಕ್ಕಿದೆ ಎಂಬ ಪ್ರಶ್ನೆ ಧುತ್ತೆಂದು ಎದುರಾಗುತ್ತದೆ.

ಬುದ್ಧನ ವಿಗ್ರಹ ಕೆಡಹುವುದು, ನಾಶಗೊಳಿಸುವುದು ಹೆಚ್ಚು ಪಾಶವೀಕೃತ್ಯವೋ ಅಥವಾ ಬುದ್ಧಪೂರ್ಣಿಮೆಯಂದು ಅಣುಬಾಂಬ್ ಸ್ಫೋಟಿಸಿ ಅವನ ನೆನಪಿಗೆ ಅವಮಾನ ಮಾಡುವುದು ಹೆಚ್ಚು ಪಾಶವೀಕೃತ್ಯವೊ? ಯಾವುದು ಹೆಚ್ಚು ಹೇಯಕೃತ್ಯ? ಬಿ.ಜೆ.ಪಿ. ಸರಕಾರ ಅಣುಬಾಂಬ್ ಸ್ಫೋಟಿಸಿದ್ದು ಯಾವ ದಿನ ಎಂದು ನಾವು ಮರೆತಿಲ್ಲ ತಾನೆ ? ಅದೇ ದಿನ ಬುದ್ಧಪೂರ್ಣಿಮೆಯೂ ಆದದ್ದು ಕೇವಲ ಆಕಸ್ಮಿಕ ಎಂದು ನಂಬಲು ಸಾಧ್ಯವೆ?

ಸುಮಾರು ಸಾವಿರದೈನೂರು ವರ್ಷಗಳ ಹಿಂದೆ ಬೆಳೆಯುತ್ತಿದ್ದ ಬೌದ್ಧ ಧರ್ಮದ ಕುರಿತಾಗಿ ಬೆದರಿದ ವೈದಿಕಶಕ್ತಿಗಳು ಬುದ್ಧನನ್ನು, ಬೌದ್ಧ ಧರ್ಮವನ್ನು ದೇಶಭ್ರಷ್ಟಗೊಳಿಸಿದ ಹಾಗೆ ಇಂದು ನಾವು ಅತ್ಯಂತ ವೈಜ್ಞಾನಿಕ ರೀತಿಯಲ್ಲಿ ಬೌದ್ಧ ಧರ್ಮವನ್ನು ಬೂದಿ ಮಾಡಿದೆವು. ಅಂದಿನಿಂದಲೂ ಬುದ್ಧನ ಬಗ್ಗೆ ಎಲ್ಲ ವ್ಯವಸ್ಥಿತ ವೈದಿಕ ಧರ್ಮಕ್ಕೂ ಒಂದು ಹೆದರಿಕೆ ಇದ್ದದ್ದೇ. ಬುದ್ಧನ ತತ್ವ ಜೀವಪರವಾದದ್ದು. ಈ ಲೋಕಕ್ಕೆ ಸಂಬಂಧಪಟ್ಟುದು. ಇಲ್ಲಿನ ಸುಖ ದುಃಖಗಳಿಗೆ ಸ್ಪಂದಿಸುವಂಥದು. ದೇವರು, ನರಕ, ಸ್ವರ್ಗ, ಜನ್ಮಜನ್ಮಾಂತರಗಳು ಇವುಗಳೆಲ್ಲ ಗೌಣ, ಮುಖ್ಯವಾದದ್ದು ಇಲ್ಲಿನ ಬದುಕು. ಇದಕ್ಕೂ ಹೆಚ್ಚಿಗೆ ಬೌದ್ಧ ಧರ್ಮ ಮೇಲು - ಕೀಳು, ಗಂಡು - ಹೆಣ್ಣು, ಉಚ್ಚ-ನೀಚ ಎಂಬ ಭೇದಭಾವವಿಲ್ಲದೆ ಮನುಷ್ಯನನ್ನು ಮನುಷ್ಯನನ್ನಾಗಿ ಮಾತ್ರ ನೋಡುವಂಥ ಧರ್ಮ. ಎಂದೇ ಮೇಲು - ಕೀಳು, ಗಂಡು-ಹೆಣ್ಣು ಈ ಭೇದಗಳನ್ನು ಸ್ಥಾಪಿಸಿಯೇ ಉದ್ಧಾರವಾಗಬೇಕಾದ ವ್ಯವಸ್ಥಿತ ಧರ್ಮಕ್ಕೆ ಬೌದ್ಧ ಧರ್ಮ ಅತ್ಯಂತ ದೊಡ್ಡ ಅಪಾಯವಾಗಿ ಕಾಣುವುದು. ಎಂದೇ ಸಾವಿರ ಸಾವಿರ ವರ್ಷಗಳ ಹಿಂದೆ ಒಂದು ಮಾರ್ಗದ ಮೂಲಕ ಬುದ್ಧನನ್ನೂ ಅವನ ಉಪದೇಶವನ್ನೂ ಗಡೀಪಾರು ಮಾಡಿದರೆ ಇಂದು ಇನ್ನೊಂದು ಮಾರ್ಗದಲ್ಲಿ ಇನ್ನೂ ಹೆಚ್ಚು ಮಾರ್ಮಿಕವಾಗಿ ಗಡೀಪಾರು ಮಾಡುತ್ತಾರೆ.

ಆದ್ದರಿಂದ ಪ್ರಶ್ನೆ ಇದು: ಬುದ್ಧಪೂರ್ಣಿಮೆಯಂದೇ ಬಾಂಬು ಸಿಡಿಸಿದ ನಮಗೆ ಬುದ್ಧ ಪ್ರತಿಮೆಗಳನ್ನು ನಾಶಪಡಿಸಿದ ತಾಲಿಬಾನ್ ಸರಕಾರವನ್ನು ದೂಷಿಸುವ ಹಕ್ಕು ಎಷ್ಟಿದೆ? ಇದೊಂದೇ ಪ್ರಶ್ನೆಯಲ್ಲ. ಇನ್ನೂ ಒಂದು ಪ್ರಶ್ನೆ ಇದೆ.

೧೯೯೨ ರಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿದಾಗ ಎಲ್.ಕೆ. ಅದ್ವಾನಿಯವರು ದೇಶಾದ್ಯಂತ ಪ್ರವಾಸ ಮಾಡಿ ಒಂದು ಮಾತನ್ನು ಪದೇ ಪದೇ ಹೇಳುತ್ತಿದ್ದರು. ಬಾಬ್ರಿ ಮಸೀದಿಯಲ್ಲಿ ಪ್ರಾರ್ಥನೆ ಮಾಡುತ್ತಿರಲಿಲ್ಲ. ಅಂದರೆ ಅದೊಂದು ಪಾಳುಬಿದ್ದ ಮಸೀದಿ. ಅದು ಇದ್ದರೆಷ್ಟು ಬಿದ್ದರೆಷ್ಟು ? ಎಂದು ಇದೇ ವಾದ ಒಪ್ಪುವಂಥದ್ದಾದರೆ ಆಫ್ಘಾನಿಸ್ತಾನದಲ್ಲಿ ಕೆಡವಿದ ಬುದ್ಧ ವಿಗ್ರಹಗಳಿಗೂ ಪೂಜೆಯಾಗಲೀ ಅದರ ಮುಂದೆ ಪ್ರಾರ್ಥನೆಗಳಾಗಲೀ ನಡೆಯುತ್ತಿರಲಿಲ್ಲವಲ್ಲ ? ಭಾರತದಲ್ಲಿ ಸಾರ್ವಜನಿಕವಾಗಿ ಇಸ್ಲಾಂ ಧರ್ಮವನ್ನು ಆಚರಿಸುತ್ತಿರುವವರು ಶೇ.೧೦ ರಿಂದ ೧೨ ರಷ್ಟು ಇದ್ದಾರೆ. ಆಫ್ಘಾನಿಸ್ಥಾನದಲ್ಲಿ ಸಾರ್ವಜನಿಕವಾಗಿ ಬೌದ್ಧ ಧರ್ಮವನ್ನು ಆಚರಣೆಯಲ್ಲಿಟ್ಟುಕೊಂಡಿರುವವರು ಎಷ್ಟು ಜನರಿದ್ದಾರೆ?

ಹೀಗಿರುವಾಗ ಈಗೇಕೆ ಇಷ್ಟು ದೊಡ್ಡ ಗಂಟಲಲ್ಲಿ ಬೊಬ್ಬೆ ಹೊಡೆಯುತ್ತೀರಿ?

ನಮ್ಮ ಪ್ರಧಾನಮಂತ್ರಿಗಳು ಇತ್ತೀಚೆಗೆ ರಾಮಮಂದಿರ ಕಟ್ಟುವುದು ರಾಷ್ಟ್ರೀಯ ಕಾರ್ಯಕ್ರಮ ಎಂದು ಸಾರಿದರು. ಬಾಬ್ರಿ ಮಸೀದಿ ಕೆಡವಿಹೋದ ದಿನ ಇದೇ ವಾಜಪೇಯಿಅವರು - ಆಗ ಅವರು ಪ್ರಧಾನಿಗಳಾಗಿರಲಿಲ್ಲ - ಒಂದು ಕವನ ಬರೆದರು, ವಿಷಾದದಲ್ಲಿ . ಕವನವನ್ನು ಕುಷ್ವಂತ್ ಸಿಂಗ್ ಅವರಿಗೆ

ತೋರಿಸಿದರು. ಸಿಂಗ್ ಅವರು 'ಕವನ ಚೆನ್ನಾಗಿದೆ, ಪ್ರಕಟಿಸಿ' ಎಂದರು. ವಾಜಪೇಯಿ ಅವರು ಮತ್ತಷ್ಟು ವಿಷಾದದ ನಗೆ ನಕ್ಕರು. ಆಂದರೆ ಆದ ದುಷ್ಕೃತ್ಯಕ್ಕೆ ಖಾಸಗಿಯಾಗಿ ವಿಷಾದ; ಪ್ರಧಾನಿಯಾದ ಮೇಲೆ ಸಾರ್ವಜನಿಕವಾಗಿ ಸಮರ್ಥನೆ, ಅನುಮೋದನೆ, ಮಸೀದಿ ಒಡೆದು 'ರಾಷ್ಟ್ರದ ಸ್ವಾಭಿಮಾನವನ್ನು ರಕ್ಷಿಸುವುದಾದರೆ', ಬುದ್ಧ ವಿಗ್ರಹಗಳನ್ನು ನಾಶಪಡಿಸಿ ತಮ್ಮ 'ಸ್ವಧರ್ಮದ ಪಾವಿತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ' ಅವರು ಯಾಕೆ ಪ್ರಯತ್ನಿಸಬಾರದು? ನಮ್ಮ ಮಾತುಗಳ, ನಮ್ಮ ನಿಲುವುಗಳ ವಿರೋಧಾಭಾಸಗಳು ನಮಗೆ ಅರಿವೇ ಆಗುವುದಿಲ್ಲವೇ? ವಿಶ್ವ ಹಿಂದೂಪರಿಷತ್ ಎಂಬ ಸಂಘಟನೆಯಲ್ಲಿ ನೂರಕ್ಕೆ ತೊಂಬತ್ತು ಜನ ಕಾವಿ ಬಟ್ಟೆ ಧರಿಸಿದ ಧರ್ಮಗುರುಗಳೇ ಇದ್ದಾರೆ. 'ಮಸೀದಿ ಕೆಡವಿದ್ದರ ಬಗ್ಗೆ ನಮಗೆ ವಿಷಾದವಿದೆ' ಎಂದು ಹೇಳಿಕೊಳ್ಳುವ ಪದಾಧಿಕಾರಿ ಧರ್ಮಗುರುಗಳೇ ಅಲ್ಲಿಯೇ ರಾಮಮಂದಿರ ಕಟ್ಟುವುದಕ್ಕೆ ಗಡುವು ನೀಡುತ್ತಿದ್ದಾರೆ. ಶಾಂತಿ, ಪ್ರೀತಿ, ವಿಶ್ವಸೋದರಭಾವ ಬೋಧಿಸಬೇಕಾದ ಧರ್ಮಗುರುಗಳೇ ಅಣುಬಾಂಬ್ ಸಿಡಿಸಿದ ವಾಜಪೇಯಿ ಅವರನ್ನು ಶಿವನಿಂದ ಪಾಶುಪತಾಸ್ತ್ರ ಗೆದ್ದು ತಂದ ಮಹಾವೀರ ಅರ್ಜುನ ಎಂದು ವರ್ಣಿಸುತ್ತಾರೆ. ವಿಧ್ವಂಸಕತನವನ್ನು ಯಾವ ಎಗ್ಗೂ ಇಲ್ಲದೆ ಬೋಧಿಸುವ, ಆಚರಿಸುವ ತಾಲಿಬಾನ್ ನಾಯಕರುಗಳನ್ನು ಟೀಕಿಸುವ ಹಕ್ಕು ನಾವು ಎಷ್ಟು ಉಳಿಸಿಕೊಂಡಿದ್ದೇವೆ? ಹಿಂದೂರಾಷ್ಟ್ರ ಎಂಬ ಪರಿಕಲ್ಪನೆಯ ಹಿಂದೆ ಎಷ್ಟೊಂದು ಅಸಹನೆ, ಹಿಂಸೆ ಅಡಗಿದೆ ಎಂಬುದನ್ನು ನಾವು ತಿಳಿಯಬೇಕು. ನಮ್ಮ ಮೂಗಿನ ನೇರದ 'ಹಿಂದೂಧರ್ಮ' 'ಹಿಂದೂಸಂಸ್ಕೃತಿ' 'ಹಿಂದೂಜೀವನಕ್ರಮ' - ಇವುಗಳಿಗೆ ವಿರೋಧವಾಗಿ ನಡೆಯುತ್ತಿದ್ದಾರೆಂಬ ಕಾರಣಕ್ಕೆ ನಾವುಗಳೆಷ್ಟು ಕ್ರೂರಿಗಳಾಗುತ್ತಿಲ್ಲ, ಎಷ್ಟು ಹಿಂಸೆಯಲ್ಲಿ ತೊಡಗುತ್ತಿಲ್ಲ ? ಐದು ಸಾವಿರ ವರ್ಷಗಳ ಭವ್ಯಭಾರತೀಯ ಪರಂಪರೆಯ ಪುನರ್‌ಸ್ಥಾಪನೆಯ ಹೆಸರಿನಲ್ಲಿ ನಾವೆಷ್ಟು ಭವಿಷ್ಯಮುಖವಾದ, ಬಹುಜನಪರವಾದ ಚಿಂತನೆ ಚಟುವಟಿಕೆಗಳಿಗೆ ಮಾರಕವಾಗುತ್ತಿಲ್ಲ ? ಮಸೀದಿಗಳನ್ನು ನಾಶಪಡಿಸುತ್ತಲೇ ನೂರಕ್ಕೆ ತೊಂಬತ್ತರಷ್ಟು ಮುಸಲ್ಮಾನರಿರುವ ಕಾಶ್ಮೀರ ಭಾರತದ ಅಂಗವಾಗಿರಬೇಕು ಎಂದು ಹಟ ಮಾಡುವುದು ಎಷ್ಟು ಸಮರ್ಥನೀಯ?

ಈ ಎಲ್ಲದರ ಕುರಿತಾದ ಗಂಭೀರವಾದ, ಪ್ರಾಮಾಣಿಕವಾದ ಚಿಂತನೆ ಈಗ ಅತ್ಯವಶ್ಯಕವಾಗಿದೆ. ಈ ತತ್‌ಕ್ಷಣದಲ್ಲಿ ತಾಲಿಬಾನ್ ಅಕೃತ್ಯ ಮತ್ತು ನಮ್ಮವರ ಅಂಥದೇ ಮತ್ತೊಂದು ಅಕೃತ್ಯ ನಮ್ಮ ಮುಂದಿದೆ.

ಬುದ್ಧವಿಗ್ರಹವಾಗಲೀ ಮಂದಿರ ಮಸೀದಿಗಳಾಗಲೀ ಕೇವಲ ಧಾರ್ಮಿಕ ಚಿಹ್ನೆಗಳಲ್ಲ. ಆಫ್ಘಾನಿಸ್ಥಾನದಲ್ಲಿನ ಬೆಟ್ಟಗಳಲ್ಲಿ ಕಡೆದ ಬುದ್ಧನ ೫೩ ಅಡಿ ಎತ್ತರದ ವಿಗ್ರಹದ ಹಿಂದೆ ಒಬ್ಬ ಕಲಾವಿದರ ಕೆತ್ತನೆ ಇದೆ; ಕಲ್ಪನೆ ಇದೆ; ಕನಸಿದೆ. ಮಂದಿರ ಮಸೀದಿಗಳು ಕಟ್ಟಿದ ಕೈಗಳಲ್ಲಿ ಕಲಾತ್ಮಕತೆ ಇದೆ; ಶಿಲ್ಪವಿದೆ. ನಶ್ವರನಾದ ತಾನು ಶಾಶ್ವತವಾದುದರ ಜೊತೆ ಸಮೀಕರಿಸಿಕೊಳ್ಳುವ ಯತ್ನವಿದೆ. ಇಡೀ ಮನುಷ್ಯಕುಲದ ತುಡಿತದ ಪ್ರತೀಕವಿದೆ. ನಿಜ-ಕೆತ್ತಿದವನು, ಕಟ್ಟಿದವನು ಬೌದ್ಧಧರ್ಮೀಯನೋ ಹಿಂದುವೋ, ಮುಸಲ್ಮಾನನೋ ಆಗಿರಬಹುದು. ಆದರೆ ಅವನು ಅಷ್ಟೇ ಅಲ್ಲ. ತನ್ನ ಧರ್ಮಕ್ಕೆ ಕಾಣಿಕೆಯಾಗಿ ಅವನು ನೀಡುತ್ತಿದ್ದರೂ ಅದು ಇಡೀ ಮನುಷ್ಯಕುಲಕ್ಕೆ ನೀಡಿದ ಕಲಾಕೃತಿ. ಬುದ್ಧವಿಗ್ರಹದ ಕೆತ್ತನೆಯಲ್ಲಿ ಒಂದು ಕೌಶಲ, ಮಂದಿರ ಕಟ್ಟುವಾಗೊಂದು, ಮಸೀದಿ ಕಟ್ಟುವಾಗ ಮತ್ತೊಂದು-ಮನುಷ್ಯ ಕೌಶಲದ ವೈವಿಧ್ಯ. ಹೀಗೊಮ್ಮೆ ಸುಂದರವಾಗಿ ಅನನ್ಯವಾಗಿ ಕಟ್ಟಿ ಮುಗಿಸಿದ ಕೂಡಲೇ ಅದು ಅವನ ಕಾಲ, ದೇಶಗಳನ್ನು ಮೀರಿ ಇತಿಹಾಸಕ್ಕೆ ಸೇರಿಹೋಗಿಬಿಡುತ್ತದೆ. ಬೌದ್ಧರು ಮಾತ್ರ ಬುದ್ಧನ ವಿಗ್ರಹದೆದುರು, ಹಿಂದುಗಳು ಮಾತ್ರ ಮಂದಿರದಲ್ಲಿ, ಮುಸಲ್ಮಾನರು ಮಾತ್ರ ಮಸೀದಿಯಲ್ಲಿ ಪ್ರಾರ್ಥನೆ ಮಾಡಬಹುದು. ಆದರೆ ಆ ಬುದ್ಧ ವಿಗ್ರಹ, ಮಂದಿರ, ಮಸೀದಿಗಳು ಇಡೀ ರಾಷ್ಟ್ರಕ್ಕೆ ಸೇರಿದುದು. ರಾಷ್ಟ್ರದ ಆಸ್ತಿ, ರಾಷ್ಟ್ರದ ಹೆಮ್ಮೆ. ಎಂದೇ ಜಾಗ್ರತೆಯಿಂದ ನಾವು ಉಳಿಸಿಕೊಳ್ಳಬೇಕು. ರಾಷ್ಟ್ರಕ್ಕೆ ಸೇರಿಹೋದ ಕಲಾಕೃತಿಗಳ ಮೇಲೆ ನಶ್ವರಮನುಷ್ಯನ ಹಕ್ಕೇನು ಇದೆ ? ಬಾಬರ್ ಮಂದಿರವನ್ನು ಕೆಡವಿದನೋ ಇಲ್ಲವೋ ಗೊತ್ತಿಲ್ಲ. ಕೆಡವಿದ್ದಾನೆ ಎಂದು ಅಂದುಕೊಂಡರೂ ಅಂದಿನಿಂದ ಇಂದಿಗೆ, ಐದುನೂರು ವರ್ಷಗಳಷ್ಟು ನಾವು ಮುಂದೆ ಬಂದಿದ್ದೇವೆ. ಅಷ್ಟರ ಮಟ್ಟಿಗೆ ನಾಗರಿಕರಾಗಿದ್ದೇವೆ. ನಾವೆಲ್ಲರೂ ಹೆಮ್ಮೆ ಪಡುವ ವಿಜ್ಞಾನಯುಗದಲ್ಲಿದ್ದೇವೆ. ವೈಜ್ಞಾನಿಕವಾಗಿ ಆಲೋಚಿಸುವುದನ್ನು ಕಲಿಯುವ ತುರ್ತು ಎಂದಿಗಿಂತ ಇಂದು ಹೆಚ್ಚಿಗೆ ಇದೆ. ಮತ್ತು ಬಹುಮುಖ್ಯವಾಗಿ ನಾವು ನೆನಪಿನಲ್ಲಿಡಬೇಕಾದ ಒಂದಂಶವಿದೆ: ನಮ್ಮ ಸಹಿಷ್ಣುತೆ ಬೇಪರತ್ತಾದಾಗ ಮಾತ್ರ ಕ್ರಿಯಾಶೀಲವಾಗುತ್ತದೆ, ಇಲ್ಲದಿದ್ದರೆ ಇಲ್ಲ.

ಹುಡುಗಿ

ತೆಲುಗು ಮೂಲ: ಡಿ. ವಸಂತ
ಕನ್ನಡಕ್ಕೆ : ಪುಷ್ಪ ಹೆಚ್.ಎಸ್.

ಬಿಳಿ ಬಟ್ಟೆಗಳನ್ನು ಸೋಮವಾರ ಒಗೆದು ಕಲ್ಲು ಬಂಡೆ ಮೇಲೆ ಇಡು. ಬಣ್ಣದ ಬಟ್ಟೆಗಳನ್ನು ಮಂಗಳವಾರ ತೆಗೆದು ಹಗ್ಗದ ಮೇಲೆ ಒಣಹಾಕು. ಮಟ ಮಟ ಮಧ್ಯಾಹ್ನದ ಬಿಸಿಲಲ್ಲಿ ತಲೆ ಮೇಲೆ ಬಟ್ಟೆ ಇಲ್ಲದೆ ಓಡಾಡಬೇಡ. ನೀನು ಹಾಕೋ ಒಳ ಉಡುಪುಗಳನ್ನು ತಕ್ಷಣ ಒಗೀಬೇಕು. ಜಾಕೆಟ್ ಹೊಲಿಸೊ ಹೊಸ ಬಟ್ಟೇಲಿ ಗಂಜಿ ಇರಕೂಡದು. ಗಂಜಿ ಇದ್ದರೆ ಜಾಕೆಟ್ ನೇತಾಡಿಕೊಂಡು ಇರತ್ತೆ. ಕುಂಬಳ ಕಾಯಿ ಬಜ್ಜೀನ ಚೆನ್ನಾಗಿ ಎಣ್ಣೆ ಕಾದ ಮೇಲೆ ಕರೀಬೇಕು. ಉಪ್ಪು ಹಾಕಿ ಇಟ್ಟಿರುವ ಮೀನನ್ನು ಪಲ್ಯ ಮಾಡಬೇಕಾದಾಗ ರಾತ್ರೀನೇ ನೀರಲ್ಲಿ ನೆನಸಿಡಬೇಕು. ತಿಂಡಿ ತಿನ್ನುವಾಗ ನಿನ್ನ ಪಕ್ಕದಲ್ಲಿ ಕೂತವರಿಗೆ ವಾಂತಿ ಬರದ ಹಾಗೆ ತಿನ್ನಬೇಕು, ಶಬ್ದ ಮಾಡದೇ ತಿನ್ನು. ಅದೇನು ವೇಶ್ಯೆಯರ ಥರಾ ಅಲಂಕಾರ ಮಾಡಿಕೊಂಡಿದೀಯಾ? ಅದೇನು ಆ ನಡಿಗೆ, ಭಾನುವಾರವಾದರೂ ಚರ್ಚಿಗೆ ಹೋಗುವಾಗ ಗಂಭೀರವಾಗಿ ನಡೆ. ಆ ದೊಡ್ಡ ಮನೆ ಗಂಡುಮಕ್ಕಳ ಜೊತೆ ಯಾವ ವಿಷಯದ ಬಗ್ಗೇನು ಮಾತಾಡಬೇಡ. ರಸ್ತೆಯಲ್ಲಿ ಹಣ್ಣು ಹಂಪಲು ತಿನ್ನಬೇಡ ನೊಣಗಳು ಇರ್ತವೆ. ಗುಂಡಿ ಈ ಥರಾ ಹೊಲೀಬೇಕು ತೋರಿಸ್ತೀನಿ ಬಾ. ಗುಂಡಿ ಎದುರಿಗೆ ಕಾಜಾ. ಅದರೊಳಗೆ ಗುಂಡಿ ತುರೋತರ ಹೊಲಿಬೇಕು. ಹೊಲಿಗೆ ಬಿಟ್ಟಿರುವ ಫ್ರಾಕ್‌ನ ಹೀಗೆ ಮೇಲಕ್ಕೆ ಮಡಚಿ ಈ ಥರಾ ಹೊಲಿಬೇಕು. ಬಟ್ಟೆ ಸರಿಯಾಗಿ ಹಾಕಿಕೊಳ್ಳೋದ ಕಲ್ತಕೋ ಯಾಕೆ ಹಂಗೆ ವೇಶ್ಯೆಯರ ಡ್ರಸ್ ಮಾಡಿಕೊಳ್ತೀಯಾ? ನಿಮ್ಮ ತಂದೆ ಶರ್ಟಿನ ಇಸ್ತ್ರಿ ಮಾಡೋದು ಕಲಿತುಕೋ. ಎಲ್ಲೂ ಸುಕ್ಕು ಬರಬಾರದು. ಪ್ಯಾಂಟೂ ಅಷ್ಟೇ ಎಲ್ಲೂ ಸುಕ್ಕು ಬರದ ಹಾಗೆ ಇಸ್ತ್ರಿ ಮಾಡಬೇಕು. ನಾನು ರಸ್ತೆ ಮೇಲೆ ಯಾವತ್ತು ಏನೂ ತಿಂದಿಲ್ಲ. ಬೆಂಡೇಕಾಯಿ ಬೀಜ ಇದು. ಇದನ್ನು ಮನೆಗೆ ಸ್ವಲ್ಪ ದೂರದಲ್ಲಿ ನೆಡಬೇಕು. ಆ ಗಿಡಕ್ಕೆ ಕೆಂಪು ಇರುವೆ ಬರುತ್ತೆ ಅದಕ್ಕೆ. ಸುವರ್ಣಗೆಡ್ಡೆ ಬೆಳಸುವಾಗ ತುಂಬಾ ನೀರು ಹಾಕಬೇಕು. ಇಲ್ಲದೆ ಹೋದ್ರೆ ತಿನ್ನೋವಾಗ ನಾಲಿಗೆ ನವೆ ಆಗುತ್ತೆ. ಮನೇಲಿ ರೂಮು ಮೂಲೆಗಳನ್ನು ಈ ತರಹ ಗುಡಿಸಬೇಕು. ಆಚೆ ಗುಡಿಸುವಾಗ ಈ ಪೊರಕೆ ಬಳಸು. ನಿನಗೆ ಇಷ್ಟ ಇಲ್ಲದೆ ಇರುವವರು ಬಂದಾಗ ಈ ರೀತಿ ನಗು. ನಿನ್ನ ಸ್ನೇಹಿತರಾದರೆ ಈ ಥರಾ ನಗಬೇಕು. ಈ ಟೀ ಕಪ್‌ಗಳನ್ನು ಈ ತರಹ ಜೋಡಿಸಿ ಇಡಬೇಕು. ಅವುಗಳನ್ನು ಇಡೋ ಟೇಬಲ್ಲನ್ನು ಕ್ಲೀನಾಗಿ ಜೋಡಿಸಬೇಕು. ಡಿನ್ನರ್ ಟೇಬಲ್ ಈ ಥರಾ ಇರಬೇಕು. ದೊಡ್ಡವರು ಊಟಕ್ಕೆ ಬಂದಾಗ ಈ ಟೇಬಲನ್ನು ಈ ಥರಾ ಇಡು. ಮಧ್ಯಾಹ್ನದ ಊಟಕ್ಕೆ ಬೇಕಾಗಿಲ್ದೆ ಇರೋದನ್ನ ತೆರೆದು ಬಿಡು. ನಿನಗೆ ಪರಿಚಯ ಇಲ್ಲದ ಹುಡುಗರ ಹತ್ತಿರ ಈ ಥರಾ ನಡೆದುಕೊಳ್ಳಬೇಕು. ಅವರು ನಿನ್ನ ಗುರುತು ಹಿಡಿಯಲ್ಲ - ಅದು ನಮ್ಮ ಒಳ್ಳೆಯದಕ್ಕೇ. ದಿನಾ ಸ್ನಾನ ಮಾಡಬೇಕು. ಬೇರೆಯವರ ಮನೆ ಗಾರ್ಡನ್‌ನಿಂದ ಹೂ ಕೀಳಬೇಡ. ನೆಲದ ಮೇಲೆ ಕೂತು ಗೋಲಿ ಆಡಬೇಡ. ನೀನೇನು ಹುಡುಗ ಅಲ್ವಲ್ಲಾ. ಕಾಗೆಗಳಿಗೆ ಕಲ್ಲು ತೂರಬೇಡ ಅಂತ ಎಷ್ಟು ಸಾರಿ ಹೇಳಬೇಕು. ಬ್ರೆಡ್ ಪುಡಿಂಗ್ ಹೇಗೆ ಸುಡಬೇಕು ಬಾ ತೋರಿಸ್ತೀನಿ. ಮೆಣಸು ಪುಡಿ ಮಾಡೋದು ಗೊತ್ತಾ? ತುಂಬಾ ನೆಗಡಿ ಆದಾಗ ಯಾವ ಔಷಧಿ ಉಪಯೋಗಿಸಬೇಕು ಗೊತ್ತಾ?

ಮೀನು ಈ ಥರಾ ಹುರೀಬೇಕು ! ನಿನಗೆ ಇಷ್ಟ ಇಲ್ಲದೇ ಇರೋ ಮೀನು ಸಿಕ್ಕರೆ ಈ ಥರಾ ಬಿಸಾಡು. ಇಲ್ಲದಿದ್ದರೆ ಬರೀ ಕೆಲಸಕ್ಕೆ ಬಾರದ ಮೀನುಗಳು ಮಾತ್ರ ಸಿಗುತ್ತೆ. ಗಂಡಸರನ್ನು ಹೇಗೆ ಅಳಿಸಬೇಕು ಗೊತ್ತಾ? ಗಂಡಸು ನಿನ್ನ ಈ ಥರಾ ಅಳಿಸ್ತಾನೆ. ಅವನನ್ನು ಪ್ರೀತಿಸೋ ಥರಾ ತೋರಿಸು. ಅದು ಕೆಲಸ ಮಾಡದೇ ಹೋದರೆ ಬೇರೆ ಬೇರೆ ದಾರಿಗಳಿವೆ ಬಿಡು! ಯಾವ ದಾರಿನೂ ಕೆಲಸಕ್ಕೆ ಬರದೇ ಅವನು ಸರಿಹೋಗದಿದ್ದಲ್ಲಿ ಅವನನ್ನು ಬಿಟ್ಟು ಬಿಡೋಕೆ ಹಿಂದೆ ಹೆಜ್ಜೆ ಹಾಕಬೇಡ. ನಿನಗೆ ಗಾಳಿಗೆ ಉಗಿಯಬೇಕೆನಿಸಿದರೆ ಈ ಥರಾ ಉಗಿ. ಬೇಗ ಉಗಿಯಬೇಕು. ಇಲ್ಲದೇ ಹೋದರೆ ಅದು ನಿನ್ನ ಮೇಲೇ ಬೀಳುತ್ತೆ. ಬ್ರೆಡ್ ತರೋವಾಗ ಸ್ವಲ್ಪ ಅದನ್ನು ಅದುಮಿ ನೋಡು. ಇಲ್ಲದಿದ್ದರೆ ಹಳೇ ಬ್ರೆಡ್ ಸಿಕ್ಕಿ ಬಿಡುತ್ತೆ. ಬೇಕರಿ ಅಂಗಡಿಯವನು ಬ್ರೆಡ್ ಒತ್ತಿ ನೋಡಲು ನನ್ನನ್ನು ಬಿಡದಿದ್ದರೆ?

ಏನು? ನಿನೆಂಥಾ ಹೆಂಗಾಗ್ತೀಯ? ಬೇಕರಿ ಅಂಗಡಿಯವನು ಬ್ರೆಡ್‌ನ್ನು ಒತ್ತಿ ನೋಡಲು ಬಿಡಲ್ವಾ. ನೀನು ಸುಮ್ನೆ ಇರ್ತೀಯಾ? ನಾಚಿಗ್ಗೇಡು?

ಅಂದ್ರೆ !!! ಬೇಕರಿ ಅಂಗಡಿಯವನು ಬ್ರೆಡ್ ಮುಟ್ಟಲು ಬಿಡದೇ ಹೋದ್ರೆ ನೋಡ್ತಾ ನಿಂತುಕೊಳ್ಳೊ ಹೆಂಗಸರ ಥರಾ ನೀನು ಆಗ್ಬೇಕು ಅಂತ ಅಂದುಕೊಳ್ತಾಯಿದೀಯಾ?

(ಜಮೈಕಾ ಕಿಂಬ್ಲೈಡ್ ವೆಸ್ಟ್ ಇಂಡೀಸ್‌ನಲ್ಲಿ ಜನಿಸಿ ಅಮೇರಿಕಾದಲ್ಲಿ ನೆಲಸಿದ ಲೇಖಕಿ. ಕಾದಂಬರಿಕಾರರಾಗಿ ಖ್ಯಾತರಾದ ಈ ಲೇಖಕಿ ದೈನಂದಿನ ಜೀವನಕ್ಕೆ ಸಂಬಂಧಪಟ್ಟಂತ ವಿಷಯಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅವರ The Girl ಪ್ರಕಟವಾದ ಪ್ರಥಮ ಕೃತಿ)

ಡಾ॥ ಬಿ.ಆರ್. ಅಂಬೇಡ್ಕರ್ - ಸ್ತ್ರೀ

ಸಾವಿರಾರು ವರ್ಷಗಳಿಂದ ಇಂಡಿಯಾದ ಸ್ತ್ರೀಯರು ಪುರುಷರಿಂದ ಶೋಷಣೆಯನ್ನು ಇಂದಿಗೂ ಅನುಭವಿಸುತ್ತಲೇ ಬಂದಿದ್ದಾರೆ, ಬರುತ್ತಿದ್ದಾರೆ ಅಂದರೆ ತನ್ನ ಕುಟುಂಬದಲ್ಲಿಯೂ ಕೂಡ ಸ್ತ್ರೀ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಅನುಭವಿಸಲು ಸಾಧ್ಯವಾಗುತ್ತಿಲ್ಲ. ಇಂಡಿಯಾದ ಜನರು ಪವಿತ್ರಗ್ರಂಥಗಳೆಂದು ಪೂಜಿಸಲ್ಪಡುವ 'ಮನುಸ್ಮೃತಿ' ಯಂಥ ಬೃಹತ್ ಗ್ರಂಥಗಳಲ್ಲಿಯೂ ಸ್ತ್ರೀಯರನ್ನು ಕೇವಲ ಭೋಗದ ವಸ್ತುವಾಗಿ ಮಾತ್ರ ನೋಡುತ್ತಿದ್ದಾರೆ, ಉದಾಹರಣೆಯಾಗಿ ಈ ಉಕ್ತಿ ನೋಡಬಹುದು.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ।

ರಕ್ಷಂತಿ ಸ್ಥವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ

ಭಾರತ ದೇಶವು ಜಾತೀಯತೆಗೆ ಕುಲ, ಗೋತ್ರ, ಒಳ ಪಂಗಡಗಳಿಗೆ ತವರು ಮನೆಯಾಗಿದೆ. ಸ್ತ್ರೀಯನ್ನು ಪುರುಷ ಸದಾ ತನ್ನ ಅಧೀನದಲ್ಲಿಯೇ ಇರುವುದು ಬಯಸುತ್ತಾನೆ. 'ಕಾಲ ಸನ್ನಿಹಿತವಾದಾಗ ಸಂದರ್ಭ ಒದಗಿ ಬಂದಾಗಿ ಈ ದೇಶವೆಲ್ಲ ಏಕದೇಹಿಯಾಗಿ ಒಂದಾಗುವುದನ್ನು ತಡೆಯಲು ಜಗತ್ತಿನ ಯಾವ ಶಕ್ತಿಗೂ ಸಾಧ್ಯವಾಗಲಾರದೆಂಬುದು ಬಾಬಾ ಸಾಹೇಬರ ಅಚಲವಾದ ನಂಬಿಕೆ ಆಗಿತ್ತು.' ಹಾಗಾಗಿ ಅವರು ತಮ್ಮ ಜೀವಿತದುದ್ದಕ್ಕೂ ಸ್ತ್ರೀಯರ ಹೋರಾಟ ಅವರಲ್ಲಿದ್ದ ಛಲ, ದಿಟ್ಟತನ, ಎದೆಗಾರಿಕೆ, ಸಂಘರ್ಷದ ಗುಣಗಳನ್ನು ಪ್ರಶಂಶಿಸುತ್ತಾ ಪ್ರೇರೇಪಿಸುತ್ತಿದ್ದರು. ಯಾವ ದೇಶದಲ್ಲಿ ಮಹಿಳೆಯರನ್ನು ಗೌರವದಿಂದ ಕಾಣಲಾರರು, ಪೂಜಿಸಲಾರರು, ಸ್ಥಾನಮಾನ ನೀಡಲಾರರು ಅಂಥಹ ದೇಶ ಖಂಡಿತವಾಗಿಯೂ ನಾಶ ಹೊಂದುತ್ತದೆ.

ಮಹಿಳೆಯರಿಂದಲೂ ಸಮಾಜದ ಉದ್ಧಾರ, ಅವರನ್ನು ಅವಮಾನಗೊಳಿಸುವ ಪುಸ್ತಕ ಎಂಥಹ ಪವಿತ್ರವಾಗಿದ್ದರೂ ಚಿಂತೆ ಇಲ್ಲ ಎಂದು ಅರಿತ ಬಾಬಾ ಸಾಹೇಬರು 'ಮನುಸ್ಮೃತಿ' ಪುಸ್ತಕವನ್ನು ಮುಂಬೆಯಲ್ಲಿ ಬಹಿರಂಗವಾಗಿ ಸುಟ್ಟು ಹಾಕಿದರು. ಅಂದಿನಿಂದಲೇ ಸ್ತ್ರೀಯರ ಮನೋಭೂಮಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಯಾಯಿತು, ತನ್ನ ಅಸ್ತಿತ್ವಕ್ಕಾಗಿ ಹೋರಾಡಲು ಅಣಿಯಾದರೂ ಎಲ್ಲ ರಾಷ್ಟ್ರಗಳಿಗಿಂತ ಹೆಚ್ಚು ಸಂವಿಧಾನದ ತಿದ್ದುಪಡಿಯಾದ ದೇಶ ಭಾರತ, ಸಂವಿಧಾನದ ಪರಿವಿಡಿಯಲ್ಲಿಯೇ ಯಾವ ಬಣ್ಣ, ಲಿಂಗ, ಧರ್ಮದ ತಾರತಮ್ಯತೆಯನ್ನು ಮಾಡಬಾರದೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ಲಿಖಿತ ಸಂವಿಧಾನದ ಅನುಷ್ಠಾನಗೊಳಿಸಲು ಸೋಲಾಗಿದೆ. ಇಂದಿಗೂ ಸಮಾನತೆ ಕಾಣುತ್ತಿಲ್ಲ. ಪುರುಷರು ಮಹಿಳೆಯರನ್ನು ಗುಲಾಮತನದಿಂದಲೇ ಕಾಣುವುದು ಕಟು ಸತ್ಯ.

ಅಂಬೇಡ್ಕರರು ಇಂಡಿಯಾದ ಮಹಿಳೆಯರ ಕುರಿತು ಅವರ ಕಣ್ಣೀರು ಶಾಶ್ವತವಾಗಿ ಒರೆಸುವ ಬಗೆ, ಮೌನಕ್ಕೆ ಪರಿಹಾರ, ...ನೆಲೆಯನ್ನು ಹುಡುಕಲು ಸಂವಿಧಾನವನ್ನು ರಚಿಸಿದರು. ಮಹಿಳೆಯರು ಎಲ್ಲ ರಂಗದಲ್ಲಿ ಭಾಗಿಗಳಾಗಬೇಕೆಂದು ಬಯಸಿ ಸ್ಪರ್ಧಾತ್ಮಕ ಗುಣ ಅವರಲ್ಲಿ ಬರುವಂತೆ ಪ್ರತಿಯೊಬ್ಬರಿಗೂ 'ಅಕ್ಷರ' ಜ್ಞಾನದ ಅಗತ್ಯವಿದೆ ಎಂದು ಕಡ್ಡಾಯಗೊಳಿಸಿದರು. ಸಾಮಾಜಿಕ ಕಾನೂನು ಮತ್ತು ಶಾಸನಾತ್ಮಕ ಕಾನೂನುಗಳು ವಿಶೇಷ ಕಾಯ್ದೆಯನ್ನು ರಚಿಸಿದರು. ತಳಸ್ತರದ ನೊಂದ, ಸಾಮಾಜಿಕವಾಗಿ ಅವಮಾನಿತಳಾದ ಸ್ತ್ರೀಯೂ ಮುಖ್ಯಮಂತ್ರಿ, ಪ್ರಧಾನಮಂತ್ರಿಯಾಗಬೇಕೆಂದು ಕನಸು ಕಂಡಿದ್ದು ಅವರ ಕನಸು ನನಸಾಗುವಂತೆ ಗುಡಿಸಲಿನಲ್ಲಿ ನ ಉತ್ತರ ಪ್ರದೇಶದ ಸಿಂಹಿಣಿ ಮಾಯಾವತಿಯೂ ಮೂರನೇ ಬಾರಿಗೆ ಸತತವಾಗಿ ಮುಖ್ಯಮಂತ್ರಿಯ ಸ್ಥಾನವನ್ನ ಲಂಕರಿಸುತ್ತಿರುವುದಕ್ಕೆ ಸಾಕ್ಷಿ.

ಮಹಿಳೆಯರು ಬದುಕು ಬವಣೆಗಳ ಸರಮಾಲೆ ಎಂದು ಹೇಳಲಾಗುತ್ತದೆ. ದೃಷ್ಠಿಯಂತೆ ಸೃಷ್ಠಿ ಎಂಬ ಗಾಧೆ ಜನತೆ ಮರೆತಿದೆ. ದೇಶದ ಸ್ವಾತಂತ್ರ್ಯಕ್ಕಾಗಿಯೂ ಗಾಂಧೀಯವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಪ್ರಾಣತ್ಯಾಗ ಮಾಡಿದ ಮಹನೀಯರ ಸಂಖ್ಯೆಯೂ ಗರಿಷ್ಠವಾಗಿಯೇ ಕಾಣಬಹುದು. ಇತಿಹಾಸದ ದಾಖಲೆಯಲ್ಲಿಯೂ ಮಹಿಳೆಯರು ತಮ್ಮ ಹೆಸರು ಚಿರಸ್ಥಾಯಿಯಾಗುವಂತೆ ಮಾಡಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರೂ ಇಂಡಿಯನ್ನರನ್ನು ಗುಲಾಮರನ್ನಾಗಿ ಆಳುತ್ತಿದ್ದರು ಆದರೆ ಇಂದು ಭಾರತೀಯರೇ ಭಾರತೀಯರನ್ನು ಆಳುತ್ತಿದ್ದಾನೆ. ನಿತ್ಯವೂ ಬಡವರ ಮೇಲೆ ದೌರ್ಜನ್ಯ, ಅತ್ಯಾಚಾರ, ಅಂಕೆ ಮೀರಿ ಸಾಗುತ್ತಿದೆ. ಕಾನೂನುಗಳಿರುವುದ ಬಲಿತ-ಬಲ್ಲದರ ಹಿತ ರಕ್ಷಣೆಗಾಗಿ ಮಾತ್ರ.

ಸಾಮಾಜಿಕ, ರಾಜಕೀಯ, ಆರ್ಥಿಕ ವಲಯಗಳಲ್ಲಿ ಮಹಿಳೆಯರು ಬೃಹತ್ಕಾರವಾಗಿ ಮುನ್ನುಗ್ಗುವುದು ಅಗತ್ಯವಿದೆ. ಅಕ್ಷರ ಲೋಕದಿಂದ, ವಿಜ್ಞಾನ ಲೋಕದ ಪರಿಧಿಯೊಳಗೆ ಬರಬೇಕೆಂದರೆ ಪ್ರಥಮವಾಗಿ ಇಂಡಿಯಾದಲ್ಲಿರುವ ಪ್ರತಿಯೊಂದು ಗುಡಿಸಲುಗಳು ಇಲ್ಲದಂತಾಗುವುದು ಬಲು ಮುಖ್ಯ. ರಾಜಕೀಯ ರಂಗದಲ್ಲಿ ಮಹಿಳೆಯ ಅವರ ಜನಸಂಖ್ಯೆಗೆ ಆಧಾರಿತವಾಗಿ ಮೀಸಲಾತಿ ಪಡೆದುಕೊಳ್ಳಲೇಬೇಕು ಎಂದು 1947 ರಲ್ಲಿಯೇ ನಾಡಿದರು. ಸಾಮಾಜಿಕವಾಗಿ ಕೆಲ ಅಸಂಬದ್ಧ, ಗೊಡ್ಡು ಹಳೆಯ ಸಂಪ್ರದಾಯಗಳು ಇಂದಿಗೂ ಆಚರಿಸಿಕೊಂಡು ಬರುವುದರೊಂದಿಗೆ ತಮ್ಮ ಕೀರ್ತಿಯ ಗರಿ ಹೆಚ್ಚಿಸುತ್ತಾ ಮಹಿಳೆಯರ ಸ್ಥಾನಮಾನದಲ್ಲಿ ಕೀಳರಿಮೆಯನ್ನು ತರುತ್ತಿದ್ದಾರೆ.

ಬಾಬಾ ಸಾಹೇಬರು ಲಿಖಿತ ರೂಪದಲ್ಲಿ ಕೊಟ್ಟ ಸಂವಿಧಾನವು ಇಂದು ಮಹಿಳೆಯರ ಪಾಲಿಗೆ ವರದಾನವಾಗಿ ಪರಿಣಾಮ ಬೀರುತ್ತಿದೆ. ಹಾಗಾಗಿ ಎಲ್ಲ ಸ್ತರಗಳಲ್ಲಿ ಮಹಿಳೆಯರು ಇಂದು ತಮ್ಮ ಹೆಜ್ಜೆಯನ್ನು ಇರಿಸುತ್ತಿದ್ದಾರೆ. ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತಿದ್ದಾರೆ. ತಾನು ಯಾರಿಗೇನು ಕಮ್ಮಿ ಇಲ್ಲ ಎಂಬಂತೆ ಮುನ್ನುಗ್ಗುತ್ತಿದ್ದಾರೆ. ಬಾಬಾ ಸಾಹೇಬರು ಕಂಡ ಕನಸು ನನಸುಗೊಳಿಸಲು ಮಹಿಳೆಯರೆಲ್ಲರೂ ಅಕ್ಷರಸ್ತರಾದಾಗ ಮಾತ್ರ, ಅದರಿಂದ ಸಂಘಟಿತರಾಗಿ ಸಾಮಾಜಿಕ ನ್ಯಾಯ ಪಡೆದಾಗ ಮಾತ್ರ ಸಮಾನತೆಯಿಂದ ಎಲ್ಲ ಮಹಿಳೆಯರು ಸಮಾಜದಲ್ಲಿ ಪಾಲುಗಾರಿಕೆ ವಹಿಸುವುದು ಅಗತ್ಯವಿದೆ.

ಸಮತಾ ದೃಷ್ಠಿಯಿಂಧ ಸಮಾಜದ ಸದಸ್ಯರು ಎಲ್ಲ ಸ್ತ್ರೀಯರನ್ನು ಕಾಣಬೇಕೆಂದು ಬಾಬಾ ಸಾಹೇಬರು ಕೆಲವು ಅಗತ್ಯ ವಿಶೇಷವಾಗಿ ಮಹಿಳೆಯರ ಹಿತ, ಸುರಕ್ಷೆ, ಭದ್ರತೆಗಾಗಿ ರೂಪಿಸಿ ನ್ಯಾಯ ಒದಗಿಸಿದ್ದಾರೆ. ವಿಧವಾ ಮಹಿಳೆಯರಿಗೆ ಪುನರ್ ವಿವಾಹಕ್ಕೆ ಆದ್ಯತೆ ನೀಡಿ ಕತ್ತಲಾದ ಮಹಿಳೆಯರ ಬದುಕಿನಲ್ಲೂ ಚಂದ್ರನಂತೆ ಬೆಳದಿಂಗಳು ಮೂಡಲು ಸಹಾಯ ಮಾಡಿದ್ದಾರೆ. ಅಸಹಾಯಕರಾದ ಸ್ತ್ರೀಯರಿಗೆ ಆರ್ಥಿಕ ಸ್ವಾವಲಂಬನೆ, ಆತ್ಮೀಯತೆ, ವಾತ್ಸಲ್ಯ, ಸದಾ ಇರಬೇಕೆಂದು ಪ್ರೀತಿ ಸಹೋದರತೆಯಿಂದ ಎಲ್ಲರೂ ಇರಬೇಕೆಂದು ಬಯಸಿದಂತ ಸಮಾಜ ಸುಧಾರಕ ಚಿಂತಕ, ಚಿಕಿತ್ಸಕ ಬಿ.ಆರ್ ಅಂಬೇಡ್ಕರರು ಮಹಿಳಾ ವರ್ಗವನ್ನೇ ಜಾಗೃತಗೊಳಿಸಿ ಎಚ್ಚರಿಕೆಯ ಘಂಟೆ ಬಾರಿಸಿದ ಪ್ರಥಮರು.

- ಸಮತಾ ಬಿ. ದೇಶಮಾನೆ

ಪರಕೆ - ಚಪ್ಪಲಿಯ ಪ್ರಹಾರ

ಯಾವ ಹಳ್ಳಿಯಲ್ಲಿ ಮದುವೆಯಾದ ಮೂರೇ ತಿಂಗಳಿಗೆ ಬಾಲೆಯೊಬ್ಬಳು ಗಂಡ ಮತ್ತು ಅವನ ಮನೆಯವರಿಂದ ದಾರುಣವಾಗಿ ಕೊಲೆಯಾದಳೋ ಅದೇ ಊರಿನ ಜನ ಅವರ ಊರಿನ ಹೆಂಗಸರ ಬಗ್ಗೆ ಕೀಳಾಗಿ, ಅವಹೇಳನಕಾರಿಯಾಗಿ ಮಾತನಾಡಿದ ವ್ಯಕ್ತಿಯನ್ನು ಪೊರಕೆ ಮತ್ತು ಚಪ್ಪಲಿಯಿಂದ ಹೊಡೆದು ಬುದ್ಧಿ ಕಲಿಸಿದ ಘಟನೆ ನಡೆದಿದೆ. ಆಟೋ ಚಾಲಕನೊಬ್ಬ ತನ್ನ ಸಹ ಪಾಠಿಗಳೊಂದಿಗೆ ಹರಟೆ ಕೊಚ್ಚುತ್ತಾ ಕುಶಾಲನಗರದ ಪಕ್ಕದ ಹಳ್ಳಿಯೊಂದರ ಹೆಣ್ಣುಮಕ್ಕಳ ಬಗ್ಗೆ ಮಾತನಾಡುತ್ತಾ ಅದು Red light area ಆಗಿದೆ. ಪರಊರಿಂದ ಬಂದ ಗಂಡಸರು ಕೇಳಿದರೆ ನಾನು ಆ ಜಾಗಕ್ಕೆ ಕರೆದುಕೊಂಡು ಹೋಗಿ ಬಿಡಬಹುದು ಎಂದು ಹೇಳಿದ್ದೇ ಇಲ್ಲಿಯ ಹೆಂಗಸರ ಕೋಪಕ್ಕೆ ಕಾರಣವಾಗಿದೆ.

ಬಹಳ ವರ್ಷಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದಿರುವ ಈ ಗ್ರಾಮ ಸರಕಾರದ ಸೌಲಭ್ಯಗಳಿಂದ ವಂಚಿತವಾಗಿ ಕಡು ಬಡವರಿರುವ ಗುಂಪು ಮನೆಗಳಿರುವ ಚಿಕ್ಕ ಊರು. ಜನಪ್ರತಿನಿಧಿಗಳು ತಮ್ಮ ಓಟಿಗಾಗಿ ಜನರನ್ನು ಉಪಯೋಗಿಸಿಕೊಂಡು ಜನರ ಬೇಕು ಬೇಡಗಳ ಬಗೆಗೆ ಪ್ರಾಮಾಣಿಕ ಗಮನ ಹರಿಸದೆ ಹಿಂದುಳಿದ ಈ ಗ್ರಾಮದಲ್ಲಿ ಎಲ್ಲ ಜಾತಿ, ಧರ್ಮದ ವರ್ಗದ ಜನ ಅನ್ಯೋನ್ಯತೆಯಿಂದ ಬದುಕು ಸಾಗಿಸುತ್ತಿದ್ದಾರೆ.

ಊರೊಳಗೆ ಒಂದು ಜಾತಿ, ದೇವಸ್ಥಾನ, ಅಂಚೆ ಕಛೇರಿ, ಅಂಗನವಾಡಿ ಹಾಗೂ ಸಾರಾಯಿ ಅಂಗಡಿ ಕೂಡಾ ಇದೆ. ಊರಿನ ಶಾಲೆ ಮತ್ತು ದೇವಸ್ಥಾನದ ಏಳಿಗೆಗಾಗಿ ಸಂಬಂಧಪಟ್ಟ ಸಮಿತಿಯವರು ತಮ್ಮ ಶಕ್ತಿ ಮೀರಿ ದುಡಿಯುತ್ತಿದ್ದಾರೆ. ಆದರೆ ದಿನವಿಡೀ ಕೂಲಿ ನಾಲಿ ಮಾಡಿ ಸಂಪಾದಿಸಿದ ಹಣ ಎಷ್ಟೋ ಕುಟುಂಬಗಳಲ್ಲಿ ಮನೆ ವಿನಿಯೋಗಕ್ಕೆ ಖರ್ಚಾಗದೆ ಸಾರಾಯಿ ಅಂಗಡಿಗೆ ಸುರಿದು ಹೋಗುವುದರ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವವರಿಲ್ಲ. ಗಂಡಸರ ಜೊತೆಗೆ ಹೆಂಗಸರು ಕೂಡಾ ತಮ್ಮ ದುಡಿಮೆಯ ಆಯಾಸ ನಿವಾರಿಸಿಕೊಳ್ಳುವ ಸಲುವಾಗಿ, ಮನಸ್ಸಿನ ನೋವನ್ನು ಮರೆಯುವುದಕ್ಕಾಗಿ ಇಲ್ಲವೇ ಅಭ್ಯಾಸಬಲವನ್ನು ದೂರ ಮಾಡಲಾಗದ ಚಟದಿಂದ ಕುಡಿತಕ್ಕೆ ಬಲಿಯಾಗಿ ನಿತ್ಯ ಜೀವನದಲ್ಲಿ ತೊಳಲಾಡುತ್ತಿದ್ದಾರೆ.

ನಿಶೆ ಏರಿದ ಮೇಲೆ ಮಾತಿಗೆ ಮಾತು ಬೆಳೆದು ಜಗಳಕ್ಕೆ ನಾಂದಿಯಾಗಿ ಅಕ್ಕಪಕ್ಕದವರ ನಿದ್ರೆಗೆ ಭಂಗವಾಗುವುದಂತೂ ಸಾಮಾನ್ಯ. ವಿವಿಧತೆಯಲ್ಲಿ ಏಕತೆ ಎಂಬ ಹಾಗೆ ಬೇರೆ ಬೇರೆ ರೀತಿಯ ಸಂಸ್ಕೃತಿಯನ್ನು ಅಳವಡಿಸಿಕೊಂಡಿರುವ ಈ ಮಂದಿಯ ಹಿನ್ನಲೆ ಬದುಕುವ ರೀತಿ ಎಲ್ಲವೂ ಅಷ್ಟೆ ಬಿನ್ನ.

ತಮ್ಮ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಜೀವನ ನಿರ್ವಹಣೆಗಾಗಿ ಊರಿಂದ ಹೊರಗಡೆ ಕೆಲಸ ಮಾಡುವುದು, ಮಧ್ಯಮ-ಮೇಲ್ಮಧ್ಯಮ ವರ್ಗದ ಜೀವನ ಶೈಲಿಗೆ ಆಕರ್ಷಿತನಾಗುವುದು ತಮ್ಮ ಆಸೆ ಆಕಾಂಕ್ಷೆಗಳಿಂದ ವಂಚಿತರಾಗಿ ಅದನ್ನು ಪೂರೈಸುವುದಕ್ಕಾಗಿ ಇಲ್ಲವೇ ಕುಟುಂಮ ನಿರ್ವಹಣೆಯ ಜವಾಬ್ದಾರಿಯಿಂದಾಗಿ ಈ ಸಮಾಜ ಒಪ್ಪದ ಕಸುಬಲ್ಲಿ ತೊಡಗುವುದು ಸಾಮಾನ್ಯ. ಅದಕ್ಕಾಗಿ ಇಡೀ ಊರನ್ನೇ ಅವಹೇಳನಕಾರಿಯಾಗಿ ನಿಂದಿಸಿದರೆ ಸಹಿಸಲು ಯಾರಿಂದಲೂ ಸಾಧ್ಯವಿಲ್ಲ. ಒಬ್ಬ ನಾಗರಿಕನ ಬಾಯಲ್ಲಿ ಬಂದ ಅನಾಗರಿಕ ಮಾತಿಂದ ಮನನೊಂದ ಮಹಿಳೆಯರು ಒಂದಾಗಿ ಆತನಿಗೆ ಪಾಠ ಕಲಿಸುವ ಯೋಜನೆ ಹಾಕಿ ತಕ್ಕ ಪಾಠ ಕಲಿಸಿದ್ದಾರೆ.

ಆದರೆ ಕೆಲವೊಮ್ಮೆ ಇಂತಹ ನಿರ್ಧಾರದಿಂದ ತೊಂದರೆ ಕೂಡಾ ಆಗಬಹುದು. ಯಾವುದೇ ತೊಂದರೆಯಲ್ಲಿ ಸಿಕ್ಕಿಹಾಕಿ ಕೊಳ್ಳದ ಹಾಗೆ ಜಾಗ್ರತೆ ವಹಿಸುವುದು ಸೂಕ್ತ.

ವರದಿ - ಜಯಶ್ರೀ, ಕುಶಾಲನಗರ

ನಾನು ಕಪ್ಪೆಂದು ಮೊದಲೇ ಗೊತ್ತಿರಲಿಲ್ಲವೆ ?

ಆಕೆ ಕಂಪ್ಯೂಟರ್ ಇಂಜನಿಯರಿಂಗ್ ಮಾಡಿ ಇಂಜನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕಿ. ಸುಮಾರು 10ರಿಂದ 12 ಸಾವಿರ ರೂ ವೇತನ ಪಡೆಯುವ ಹುಡುಗಿ. ತಂದೆ-ತಾಯಿಗೆ ಒಬ್ಬಳೇ ಮುದ್ದಿನ ಮಗಳು. ಇಬ್ಬರು ಗಂಡು ಮಕ್ಕಳು ಒದದಿದ್ದರೂ ಬುದ್ಧಿವಂತೆಯಾದ ಮಗಳನ್ನು ಓದಿಸಿದ್ದರು. ಕೋಮಲಸ್ವಭಾವದ ಮೃದು, ಕಪ್ಪು ವರ್ಣದ ಲಕ್ಷಣವಾದ ಹುಡುಗಿ.

ಈ ಹುಡುಗಿಗೆ ವಿವಾಹ ನಿಶ್ಚಿತಾರ್ಥವಾಗಿದೆ. ಹುಡುಗನ ಕಡೆಯವರು ಕೆಲಸಕ್ಕೆ ಹೋಗುವ ಹುಡುಗಿಯನ್ನೆ ಹುಡುಕುತ್ತಿದ್ದರು. ಅವನೂ ಸಹ ಪ್ರತಿಷ್ಠಿತ ಕಾಲೇಜೊಂದರಲ್ಲಿ ಪ್ರಾಧ್ಯಾಪಕ. ಮದುವೆ ನಾಲ್ಕೈದು ತಿಂಗಳು ಇರುವಾಗಲೇ ಸಾಕಷ್ಟು ಹಣ ಖರ್ಚುಮಾಡಿ ನಿಶ್ಚಿತಾರ್ಥವನ್ನು ಮಾಡಿಕೊಂಡಿದ್ದರು. ಮದುವೆಯ ದಿನ ಹತ್ತಿರ ಬಂದ ಹಾಗೆ ಮದುವೆಯ ತಯಾರಿಗಳು ಭರದಿಂದ ನಡೆಯುತ್ತಿದ್ದವು.

ಹುಡುಗ ಹುಡುಗಿಯ ಕಾಲೇಜಿನ ಬಳಿ ಹೋಗಿ ಹುಡುಗಿಯನ್ನು ಆಗಾಗ ಬೇಟಿಯಾಗುತ್ತಿದ್ದ. ಅವನಿಗಿರುವ ಸಾಮಾನ್ಯ ಜ್ಞಾನ, ಪುಸ್ತಕಗಳ ಬಗೆಗಿರುವ ಮೋಹವನ್ನು ಕುರಿತು ಹೆಮ್ಮೆಯಿಂದ ಜೊತೆಗೆ ತನಗೆ ಅಷ್ಟು ಜ್ಞಾನ ವಿಲ್ಲವೇನೋ ಎಂದು ಅಂದುಕೊಳ್ಳುತ್ತಿದ್ದಳು. ಹುಡುಗಿಯ ತಮ್ಮ, ತಾಯಿ ಆಗಾಗ ಹುಡುಗನ ಮನೆಗೆ ಹೋಗಿ ಬರುತ್ತಿದ್ದರು.

ಎರಡು ಕುಟುಂಬಗಳ ನಡುವೆ ಬೆಳೆದ ಸಲುಗೆ ಕ್ರಮೇಣ ಹುಡುಗನ ಮನೆಯ ಕಡೆಯವರಿಗೆ ಸದರಕ್ಕಿಟ್ಟುಕೊಂಡಿತು. ಹುಡುಗನ ತಾಯಿ, ಹುಡುಗಿಯ ತಾಯಿಯ ಬಳಿ ನಿಮ್ಮ ಹುಡುಗಿ ಕಪ್ಪು, ನಮ್ಮ ಹುಡುಗನಿಗೆ ಬೇಕಾದಷ್ಟು ಜನ ಹೆಣ್ಣು ಕೊಡುವವರಿದ್ದರು, ಹೆಣ್ಣು ಕೊಟ್ಟು, ಸೈಟು, ಕಾರು ಕೊಡಲು ಮುಂದೆ ಬಂದಿದ್ದರೆಂದು ಹಂಗಿಸತೊಡಗಿದರು. ನಾವು ಹೆಣ್ಣಿನ ಕಡೆಯವರು ಮದುವೆ ನಿಶ್ಚಿತಾರ್ಥ ಮುಗಿದಿದೆ. ಎಲ್ಲರಿಗೂ ವಿಷಯ ತಿಳಿದಿದೆ. ಇದು ಮರ್ಯಾದೆಯ ವಿಷಯ ಎಂದು ಹೊಟ್ಟೆಯೊಳಗೆ ನೊಂದಿದ್ದರು. ಹುಡುಗಿಯ ತಾಯಿ ಏನೂ ಎದುರುತ್ತರ ಕೊಡದೇ ಎದ್ದು ಬಂದರು. ಮನೆಗೆ ಬಂದು ಹುಡುಗಿಯ ಬಳಿ ಈ ವಿಷಯವನ್ನು ಮೆತ್ತನೆಯ ಧ್ವನಿಯಲ್ಲಿ ಹೇಳಿದಳು. ಯಾಕಮ್ಮ ನಿಶ್ಚಿತಾರ್ಥ ಮಾಡಿಕೊಳ್ಳುವ ಮೊದಲೇ ಅವರು ನನ್ನನ್ನು ನೋಡಿರಲಿಲ್ಲವೇ? ನಾನು ಕಪ್ಪು ಬಣ್ಣದವಳೆಂದು ಅವರಿಗೆ ಗೊತ್ತಿರಲಿಲ್ಲವೆ? ಅವರ ಅಮ್ಮ ನನಗಿಂತ ಕಪ್ಪಗೆ ಇದ್ದಾರೆ ಎಂದು ಕೇಳಿದಳು. ಅವರ ಅಮ್ಮ ಏನು ಹೇಳಿಯಾರು? ಇರ್ಲಿ ಬಿಡು, ನೀನೇನು ಮಾತಾಡೋಕೆ ಹೋಗ್ಬೇಡ, ಸುಮ್ಮನಿದ್ದುಬಿಡು ಎಂದು ಸಮಾಧಾನ ಪಡಿಸಿದರು. ನಾವು ಹೆಣ್ಣು ಹೆತ್ತವರು ಸುಮ್ಮನಿರಬೇಕಾಗುತ್ತೆ "ದುಃಖಿತರಾಗಿದ್ರು". ಆದರೆ ಆ ಹುಡುಗಿಯ ಮನಸ್ಸು ಸಮಾಧಾನವಾಗಲಿಲ್ಲ. ಆದ್ರೆ ಆಕೆ ನಾವು ಹೆಣ್ಣಿನ ಕಡೆಯವರು ಎಂದು ಹೇಳಿಕೊಳ್ಳುತ್ತಾ ತನ್ನನ್ನು ತಾನು ಸಮಾಧಾನ ಮಾಡಿಕೊಳ್ಳಲು ಪ್ರಯತ್ನಿಸಿದಳು.

ಹುಡುಗನ ಕಡೆಯೊಬ್ಬ ಮಹಿಳೆ ಈಕೆಗೂ ಪರಿಚಿತರು. ಆಕೆಯನ್ನೊಮ್ಮೆ ಭೇಟಿಯಾದಾಗ ಮನಸ್ಸು ತಡೆಯಲಾರದೆ,ಆಕೆಯ ಹತ್ತಿರ ಹುಡುಗನ ತಾಯಿ ಹೇಳಿದ ಮಾತುಗಳನ್ನು ಹೇಳಿ ದುಃಖ ತೋಡಿಕೊಂಡಳು. ನನ್ನನ್ನು ಮೊದಲೇ ನೋಡಿದ್ದರಲ್ಲವೇ? ನಾನು ಕಪ್ಪು ಎಂದು ಅವರಿಗೆ ಮೊದಲೇ ಗೊತ್ತಿರಲಿಲ್ಲವೇ? ಇವರ ಬಳಿ ತನ್ನ ದುಃಖವನ್ನು ಹಂಚಿಕೊಂಡದ್ದೇ ತಪ್ಪಾಯಿತೆನ್ನುವಂತೆ ಹುಡುಗನ ಮನೆಯವರಿಗೆ ವಿಷಯ ತಿಳಿದು, ಹುಡುಗ ಮಹಾಷಯ ಕಾಲೇಜಿನ ಹತ್ತಿರ ಬಂದು, ನನಗೆ ಈ ಮದುವೆ ಬೇಡವೇ ಬೇಡ, ಯಾಕೆ ನೀನು ನಮ್ಮ ಮನೆಯ ವಿಷಯವನ್ನು ಬೇರೆಯವರ ಬಳಿ ಹೇಳಿದೆಯೆಂದು ಹುಡುಗಿಯನ್ನು ದಬಾಯಿಸತೊಡಗಿದ. ಮದುವೆ ಬೇಡ ಅಂದಾಕ್ಷಣ ಆಕೆಗೆ ಆಕಾಶವೇ ಕೆಳಗೆ ಬಿದ್ದಂತಾಯಿತು. ಆಕೆ ತನಗೂ ಕೇಳಿಸದ ಮೆದು ಧ್ವನಿಯಲ್ಲಿ ತನ್ನನ್ನು ತಾನು ಸಮರ್ಥಿಸಿಕೊಳ್ಳತೊಡಗಿದಳು. ಬರುಬರುತ್ತಾ ಧ್ವನಿ ಅಡಗಿ ಕಣ್ಣೀರ ಧಾರೆ ಹರಿಯತೊಡಗಿತು. ಆತ, ಅಮ್ಮ ಹೇಳಿದ್ರಲ್ಲಿ ತಪ್ಪೇನೂ ಇಲ್ಲ. ಅವರು ಇರೋ ವಿಷಯವನ್ನೇ ಹೇಳಿದ್ದಾರೆ. ನೀನು ಹೇಗೆ ಈ ವಿಷಯವನ್ನು ಬೇರೆಯವರ ಬಳಿ ಚರ್ಚೆ ಮಾಡಿದೆ? ಹುಡುಗ ಪಟ್ಟು ಹಿಡಿದ. ಈ ಮದುವೆ ನನಗೆ ಇಷ್ಟವಿಲ್ಲವೆಂದು ಹೇಳಿದ. ಹುಡುಗಿಗೆ ದಿಕ್ಕುಕಾಣಲಿಲ್ಲ. ಮದುವೆ ಕೇವಲ ಇನ್ನು ಒಂದು ತಿಂಗಳಿಗೆ. ಆಹ್ವಾನ ಪತ್ರಿಕೆ ಹಂಚಿಯಾಗಿದೆ. ಛತ್ರ ಬುಕ್ ಆಗಿದೆ. ಸಾಕಷ್ಟು ಹಣ ಖರ್ಚಾಗಿದೆ. ಆಕೆಯ ಕಣ್ಣಲ್ಲಿ ನೀರು ತುಂಬಿ ಕೊಂಡಿತು. ತನ್ನದಲ್ಲದ ತಪ್ಪಿಗೆ ಹಲವಾರು ಬಾರಿ ಕ್ಷಮೆಯಾಚಿಸಿದಳು. ಕಾಲಿಗೆ ಬೀಳುತ್ತೇನೆಂದು ಕೇಳಿಕೊಂಡಳು. ಹುಡುಗ ಉದಾರ ಮನಸ್ಸಿನಿಂದ ಕ್ಷಮಿಸಿದವನಂತೆ ಸುಮ್ಮನಾದ.

ಹುಡುಗಿಯ ಮನಸ್ಸಿನ ತಲ್ಲಣ ನಿಲ್ಲಲಿಲ್ಲ. ಒಮ್ಮೆ ಅಪರೂಪಕ್ಕೆ ಬಸ್ಸಿನಲ್ಲಿ ಹೋಗುವಾಗ ಭೇಟಿಯಾದಾಗ, ಅಯ್ಯೋ ಆಂಟಿ ಜೀವನಾನೇ ಬೇಜಾರಾಗಿದೆ. ಎಲ್ಲಾದ್ರೂ ಹೋಗಿ ಸಾಯೋಣ ಅಂತ ಅನ್ನಿಸಿ ಬಿಟ್ಟಿದೆ ಎಂದು ಒಂದೇ ಉಸುರಿನಲ್ಲಿ ಉಸುರಿದಳು. ಇನ್ನು ಮದುವೆ ಒಂದು ತಿಂಗಳು ಸಹ ಇಲ್ಲ ಯಾಕಮ್ಮ ಹೀಗೆ ಮಾತಾಡ್ತೀಯ ಎಂದು ಕೇಳಿದಾಗ ನಡೆದ ಘಟನೆಯನ್ನು ವಿವರಿಸಿ ಹೇಳಿ, ಆಂಟಿ ನಾನು ಕಪ್ಪು ಅಂತ ಅವರಿಗೆ ಮೊದಲೇ ಗೊತ್ತಿರಲಿಲ್ವ. ಈಗ ನೋಡಿದರೆ ಹೀಗೆ ಮಾತಾಡ್ತಾರೆ. ಅಲ್ಲಮ್ಮ ಇನ್ನೂ ಮದುವೇನೇ ಆಗಿಲ್ಲ, ಈಗ ಆತ ಹೀಗೆ ಮಾತಾಡಿದ್ರೆ...ಮುಂದೆ ಆತ ನಿನ್ನನ್ನು ಹೇಗೆ ನೊಡಿಕೊಳ್ತಾನೆ ಅಂತ ಅನುಮಾನ ವ್ಯಕ್ತಪಡಿಸಿದರೆ. ಅದೇ ಆಂಟಿ, ನನಗೂ ಭಯವಾಗ್ತಿದೆ. ಮದುವೆಗೆ ಎಲ್ಲಾ ತಯಾರಿ ನಡೆದಿದೆ ನಾವು ಹೆಣ್ಣಿನ ಕಡೆಯವರು, ತಗ್ಗಿ ಬಗ್ಗಿ ನಡೆಯಬೇಕಲ್ಲ ಆಂಟಿ, ಹೇಗೋ ಸರಿಹೋದ್ರೆ ಸಾಕು ಎನ್ನುತ್ತಾ ಅನುಸರಿಸಿಕೊಂಡು ಬಸ್ ಇಳಿದಳು.

ಅವಳು ಬಸ್ ಇಳೀತಿದ್ದ ಹಾಗೆ ಪ್ರಶ್ನೆಗಳ ಸರಮಾಲೆಯೇ ಅವಳನ್ನು ಬೆನ್ನಟ್ಟಿಕೊಂಡು ಹೋಯಿತು. ಈ ಹುಡುಗಿ ನಗರ ಪ್ರದೇಶದ ಹುಡುಗಿ. ಅವಕಾಶಗಳಿಂದ ವಂಚಿತಳಾಗದೆ, ವಿದ್ಯಾಭ್ಯಾಸವನ್ನು ಪಡೆದ ಹುಡುಗಿ. ಅತ್ಯಾಧುನಿಕ ತಾಂತ್ರಿಕ ಪರಿಣತಿ ಹೊಂದಿದ ಹುಡುಗಿ ಅವಳ ಕಾಲಮೇಲೆ ಅವಳು ಸ್ವಾವಲಂಬಿಯಾಗಿ ಬದುಕುವ ಸಾಮರ್ಥ್ಯವಿರುವ ಹುಡುಗಿ. ಕೈತುಂಬ ದುಡಿಯುವ ಶಕ್ತಿಯಿರುವ ಹುಡುಗಿ. ಮದುವೆ ಮುರಿದು ಬಿದ್ದರೂ ಧೈರ್ಯಗೆಡಬೇಕಾದ ಸನ್ನಿವೇಶವಿಲ್ಲದ ಹುಡುಗಿ.

ಅವಳು ಪಡೆದ ಉನ್ನತ ವಿದ್ಯಾಭ್ಯಾಸಕ್ಕೂ, ಸ್ವಾಭಿಮಾನಕ್ಕೂ ಸಂಬಂಧ ವೇಕಿಲ್ಲವಾಯಿತು? ಅವಳು ಪಡೆದ ಉನ್ನತ ವಿದ್ಯಾಭ್ಯಾಸ ಅವಳಲ್ಲಿ ಯಾಕೆ ಆತ್ಮಸ್ಥೈರ್ಯವನ್ನು ತುಂಬಲಿಲ್ಲ. ಮದುವೆ ಅವಳಿಗೆ ಅನಿವಾರ್ಯವೇ? ತನ್ನ ವ್ಯಕ್ತಿತ್ವವನ್ನು ಕೇವಲ ಬಣ್ಣದಿಂದ ಅಳೆಯುತ್ತಿದ್ದ ಆತನ ಧೋರಣೆಯನ್ನು ಈಕೆ ಯಾಕೆ ಪ್ರತಿಭಟಿಸಲಿಲ್ಲ. ಆ ಶಕ್ತಿಯನ್ನು ಹೊಸಕಿ ಹಾಕಿದ ಪ್ರಬಲ ಶಕ್ತಿ ಯಾವುದು? ಇಂತಹ ಉನ್ನತ ವಿದ್ಯಾಭ್ಯಾಸ ಪಡೆದ ಈಕೆಯದೇ ಈ ಸ್ಥಿತಿಯಾದರೆ ಕನಿಷ್ಟ ವಿದ್ಯಾಭ್ಯಾಸ ಪಡೆದ ಅಥವಾ ಪಡೆಯದ ಹೆಣ್ಣುಮಕ್ಕಳ ಗತಿಯೇನು? ದುಡಿಯುವ ಹೆಣ್ಣು ಮಕ್ಕಳು ಮದವೆಯಾದ ಮೇಲೆ ದುಡಿದ ಹಣವನ್ನು ಗಂಡನ ಕೈಗಿಡುವ ಹೆಣ್ಣುಮಕ್ಕಳು ದುಡಿಮೆಯಿಂದ ಪಡೆಯಬೇಕಾದ ಅಧಿಕಾರ, ಹಕ್ಕು, ಭಾದ್ಯತೆಗಳು ಯಾವ ಮೂಲೆ ಸೇರುತ್ತವೆ? ಆ ಹುಡುಗಿಗೆ ಮದುವೆಯಿಂದ ನೀನು ಖಂಡಿತವಾಗಿಯೂ ಸುಖವಾಗಿ ಇರಲಾರೆ ಎಂದು ಜೋರಾಗಿ ಹೇಳಬೇಕೆಂದು ಕೊಂಡೆ. ಆದ್ರೆ ಹೇಳೋಕೆ ಆಗ್ಲಿಲ್ಲ. ಎಂತಹ ಸಂದರ್ಭದಲ್ಲಿಯೂ ಧೈರ್ಯ ಕಳೆದುಕೊಳ್ಳಬೇಡ ಅಂತ - ಬಸ್ ಇಳಿಯುತ್ತಿರುವವಳಿಗೆ ಕೂಗಿ ಹೇಳಿದೆ.

ಇದು ಹೇಗೆ ನಡೆದು ಹೋಯಿತು?

ಇದು ಹೇಗೆ ನಡೆದು ಹೋಯಿತು ?
ಎಲ್ಲರೂ ಜಯಕಾರ ಹಾಕುತ್ತಿದ್ದಾಗ
ನಾನೇನು ಮಾಡಿದೆ?
ನಾನೂ ಜಯಕಾರ ಹಾಕಿದೆ
ಹಾಗೆಯೇ ಎಲ್ಲರೂ ಹೆದರಿದಂತೆ
ನಾನೂ ಹೆದರಿದೆ
ಎಲ್ಲರೂ 'ಅಜೀಜ್‌ನನ್ನು ಶತ್ರು' ಎನ್ನುತ್ತಿದ್ದಾಗ
ನಾನೇನು ಮಾಡಿದೆ?
ನಾನೂ 'ಅಜೀಜ್‌ನನ್ನು' ಶತ್ರು ಎಂದೆ
ಬಾಯಿ ಬಿಡಬೇಡ ಎಂದು ಎಲ್ಲರೂ ಹೇಳಿದಾಗ
ನಾನೇನು ಮಾಡಿದೆ?
ನಾನೂ ಬಾಯಿ ಬಿಡಲಿಲ್ಲ
ಹೇಳು!
ಎಲ್ಲರೂ ಹೇಳುವುದ ನೀನೂ ಹೇಳು
ಜಯಕಾರದ ಕೂಗೂ ನಿಂತಿದೆ
ಅಜೀಜ್ ಹತನಾದ
ಮಾತುಗಳು ಉಡುಗಿ ಹೋದವು
'ಇದು ಹೇಗೆ ನಡೆದು ಹೋಯಿತು'?
ಎಂದು ಧಿಗ್ಭ್ರಾಂತರಾಗಿ ಎಲ್ಲರೂ ಕೇಳಿದರು
ಎಲ್ಲರೂ ಕೇಳಿದಂತೆ ನಾನೂ ಕೇಳಿದೆ
ಇದು ಹೇಗೆ ನಡೆದು ಹೋಯಿತು?

- ಶ್ರೀಕಾಂತ್ ಶರ್ಮಾ

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದ ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 50 ರೂ

ಸಂಸ್ಥೆಗಳಿಗೆ : 100 ರೂ

ಸಂ. ಮಂಡಳಿ

REGD No. : CPMG/KA/BGE/289/2001

BOOK - POST
PRINTED MATTER

ವಿಳಾಸ:
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು – 560 067